ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

08 ಸೆಪ್ಟೆಂಬರ್, 2026 ಮಂಗಳವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -177 ಪುಟ-4 ಹಾಸನ | E-mail : prajodayahsn@gmail.com | RNI NO: KARKAN/2007/22629



ದಕ್ಷಿಣ ಲೆಬನಾನ್‌ನ ಹಳ್ಳಿಯೊಂದರ ಮೇಲೆ ಇಸ್ರೇಲ್‌ನ ವಾಯುಪಡೆಯು ಸೋಮವಾರ ಬೆಳಿಗ್ಗೆ ನಡೆಸಿದ ಎರಡು ವೈಮಾನಿಕ ದಾಳಿಗಳಲ್ಲಿ ಒಂಬತ್ತು ಮಂದಿ ಮೃತಪಟ್ಟಿದ್ದಾರೆ.




ಮುಂದೊಂದು ದಿನ ಮರಳಿಗಾಗಿ ಯುದ್ಧ ! » 2



ಬೇಲೂರು : ಶೀಘ್ರದಲ್ಲೇ ಗೆಂಡೆಹಳ್ಳಿ ರಸ್ತೆ ಪೂರ್ಣ » 3



ಪರಿಸರ ಸ್ನೇಹಿ ಗಣೇಶ ಮೂರ್ತಿ ಪ್ರತಿಷ್ಠಾಪನೆಗೆ ಸಲಹೆ » 4


# ನೈಸ್: ಜೆಡಿಎಸ್-ಸರ್ಕಾರ ವಾಕ್ಸಮರ

- ಮುಖ್ಯಮಂತ್ರಿಗೆ ದೇವೇಗೌಡರ ಪತ್ರ
- ಕೋರ್ಟ್‌ಗೆ ಹೋಗಲಿ, ಉಪವಾಸ ಮಾಡಲಿ – ಡಿ.ಕೆ.ಶಿ. ತಿರುಗೇಟು

• ಪ್ರಜೋದಯ ವರದಿ

**ಬೆಂಗಳೂರು:** ನೈಸ್ ರಸ್ತೆಯ ಟೋಲ್ ಸಂಗ್ರಹದ ವಿಚಾರವಾಗಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಬಹಿರಂಗ ಪತ್ರ ಬರೆದಿದ್ದು, ಜೆಡಿಎಸ್ ಮತ್ತು ಸರ್ಕಾರದ ನಡುವೆ ವಾಕ್ಸಮರ ತಾರಕಕ್ಕೇರಿದೆ.

ನೈಸ್ ಯೋಜನೆಗೆ ಸಂಬಂಧಿಸಿದಂತೆ ಭೂಮಿ ಕಳೆದುಕೊಂಡವರಿಗೆ ರಾಜ್ಯ ಸರ್ಕಾರ 1,453 ನಿವೇಶನಗಳನ್ನು ಹಂಚಿಕೆ ಮಾಡುವ ನಿರ್ಧಾರವನ್ನು ಹೆಚ್.ಡಿ.ದೇವೇಗೌಡ ಅವರು ಪತ್ರದ ಮೂಲಕ ಪ್ರಶ್ನಿಸಿದ್ದಾರೆ. ನಂದಿ ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸ್ ಲಿಮಿಟೆಡ್‌ಗೆ ನಿವೇಶನಗಳನ್ನು ಹಂಚಿಕೆ ಮಾಡುವಂತೆ ಸಂಪುಟವು ನಿರ್ದೇಶಿಸಿದೆ. ಸರ್ಕಾರವು ಈ ನಿರ್ಧಾರಕ್ಕೆ ನ್ಯಾಯಾಂಗ ಅನುಮೋದನೆ ಪಡೆಯುವ ಮೂಲಕ ಕಾನೂನಿನ ನಿಯಮವನ್ನು ಬುಡಮೇಲು ಮಾಡಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದ್ದಾರೆ.



" ರಸ್ತೆ ಮತ್ತು ಮೂಲಸೌಕರ್ಯಕ್ಕಾಗಿ ಸ್ವಾಧೀನಪಡಿಸಿಕೊಂಡ ಜಾಗದಲ್ಲಿ ನಿವೇಶನ ನಿರ್ಮಿಸಲು ಅವಕಾಶವಿಲ್ಲವೆಂದು 2016ರಲ್ಲಿ ಕಾಂಗ್ರೆಸ್ ಸರ್ಕಾರವೇ ಸುಪ್ರೀಂ ಕೋರ್ಟ್‌ಗೆ ಪ್ರಮಾಣ ಪತ್ರ ಸಲ್ಲಿಸಿತ್ತು. ಕೋರ್ಟ್ ಇಂಟರ್‌ಚೇಂಜ್ ಜಾಗಗಳಲ್ಲಿ ನಿವೇಶನ ನಿರ್ಮಾಣ ಮಾಡುವುದನ್ನು ಕಾನೂನುಬಾಹಿರವೆಂದು ಸ್ಪಷ್ಟಪಡಿಸಿದೆ. ಹೀಗಿದ್ದರೂ ಸಚಿವ ಸಂಪುಟ ಹಂಚಿಕೆಗೆ ಅಂಕಿತ ಹಾಕಿದೆ.
-ಹೆಚ್.ಡಿ.ದೇವೇಗೌಡ, ಮಾಜಿ ಪ್ರಧಾನಿ

ಸಾರ್ವಜನಿಕರ ಕಣ್ಣಿಗೆ ಮಣ್ಣೆರಚಿ ಕಾನೂನಿನ ಆಡಳಿತವನ್ನು ಉಲ್ಲಂಘಿಸಬಹುದೆಂದು ನಿಮ್ಮ ಸಚಿವ ಸಂಪುಟ ಭಾವಿಸಿರುವ ರೀತಿ ಆಘಾತಕಾರಿಯಾಗಿದೆ. ನಿವೇಶನಗಳನ್ನು ನಿರ್ಮಿಸಲು ಸರ್ಕಾರವೇ ನಿರಂತರವಾಗಿ ಅನುಮತಿ ನಿರಾಕರಿಸುತ್ತಿರುವಾಗ, ಸಚಿವ ಸಂಪುಟವು ನಿವೇಶನ ಹಂಚಿಕೆಗೆ ಅನುಮೋದನೆ ನೀಡಿದೆ ಎಂದು ಹೇಳುವುದರ ಅರ್ಥವೇನು? 2016ರಲ್ಲಿ ನಿಮ್ಮ ಪಕ್ಷವೇ ಅಧಿಕಾರದಲ್ಲಿದ್ದಾಗ, ನ್ಯಾಯಾಂಗ ನಿಂದನೆ ನಡಾವಳಿಗಳ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್‌ಗೆ ಸರ್ಕಾರ ಸಲ್ಲಿಸಿದ ಎರಡು ಪ್ರಮಾಣಪತ್ರಗಳಲ್ಲಿ ಇಂಟರ್ ಚೇಂಜ್‌ಗಳಲ್ಲಿ (ರಸ್ತೆ ಸಂಪರ್ಕ ಜಂಕ್ಷನ್‌ಗಳು) ನಿವೇಶನಗಳ ನಿರ್ಮಾಣಕ್ಕೆ ಅನುಮತಿ ನೀಡುವುದು 1997ರ ಚೌಕಟ್ಟಿನ ಒಪ್ಪಂದದ ನಿಯಮಗಳಿಗೆ ವಿರುದ್ಧವಾಗಿದೆ ಎಂದು ತಿಳಿಸಿದ್ದಾರೆ.

ಬಿಎಂಐಸಿಪಿ ಯೋಜನೆಯನ್ನು ಕಾರ್ಯಗತಗೊಳಿಸಲು ಮತ್ತು ಎಫ್‌ಡಬ್ಲ್ಯೂಎ ಒಪ್ಪಂದವನ್ನು ಯಥಾವತ್ತಾಗಿ ಜಾರಿಗೆ ತರಲು ಸುಪ್ರೀಂ ಕೋರ್ಟ್ ನೀಡಿರುವ ಮ್ಯಾಂಡಮಸ್ ಆದೇಶಕ್ಕೆ ತಾವು ಬದ್ಧರಾಗಿದ್ದೇವೆ ಮತ್ತು ರಸ್ತೆಯ ಇಂಟರ್ ಚೇಂಜ್‌ಗಳಲ್ಲಿ ನಿವೇಶನಗಳನ್ನು ರಚಿಸಲು ಅನುಮತಿಸಿದರೆ ಅದು ನ್ಯಾಯಾಲಯದ ಆದೇಶಗಳ ನಿಂದನೆಯಾಗುತ್ತದೆ ಎಂದು ನಿಮ್ಮ ಸರ್ಕಾರ ವಾದಿಸಿತ್ತು. ಸುಪ್ರೀಂ ಕೋರ್ಟ್ ಸರ್ಕಾರದ ನಿಲುವನ್ನು ಎತ್ತಿ ಹಿಡಿಯಿತು ಮತ್ತು ನೈಸ್ ಸಂಸ್ಥೆಯು ಎಫ್‌ಡಬ್ಲ್ಯೂಎ ಒಪ್ಪಂದಕ್ಕೆ ಸಂಪೂರ್ಣವಾಗಿ ಬದ್ಧವಾಗಿರಬೇಕೆಂದು ಸ್ಪಷ್ಟವಾಗಿ ಹೇಳಿತು ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಇಂಟರ್‌ಚೇಂಜ್‌ಗಳಲ್ಲಿ ರಸ್ತೆ ಹಾಗು ಮೂಲಸೌಕರ್ಯ ನಿರ್ಮಾಣಕ್ಕಾಗಿ ಹಸ್ತಾಂತರಿಸಲಾದ ಜಮೀನುಗಳಲ್ಲಿ ನಿವೇಶನಗಳನ್ನು ರಚಿಸುವುದು ಎಫ್‌ಡಬ್ಲ್ಯೂಎ ಒಪ್ಪಂದದಲ್ಲಿ ಆಧಾರವನ್ನು ಹೊಂದಿಲ್ಲದಿರುವುದಷ್ಟೇ ಅಲ್ಲದೆ, ನಗರದ ದಟ್ಟಣೆಯನ್ನು ಕಡಿಮೆ ಮಾಡುವ ಬಿಎಂಐಸಿಪಿ ಯೋಜನೆಯ ಮೂಲ ಉದ್ದೇಶಕ್ಕೆ ಭಂಗ ತರುತ್ತದೆ ಎಂದು ಅಭಿಪ್ರಾಯ ಪಟ್ಟಿತು. ಸ್ವಯಂ ಪ್ರೇರಿತವಾಗಿ ಜಮೀನು ಬಿಟ್ಟುಕೊಟ್ಟ ಸಂತ್ರಸ್ತರಿಗೆ ನೀಡಿದ ಭರವಸೆಯಂತೆ ಪರಿಹಾರವಾಗಿ ನಿವೇಶನಗಳನ್ನು ಹಂಚಿಕೆ ಮಾಡಲು ನಿಮ್ಮ ಸಂಪುಟ ಅನುಮೋದನೆ ನೀಡಿದೆ ಎಂದು ಟೀಕಿಸಿದ್ದಾರೆ.

» ನಾಲ್ಕನೇ ಪುಟದಲ್ಲಿ

## ಮನೆ ಬೇಡವಾದರೆ ಹಕ್ಕುಪತ್ರ ವಾಪಾಸ್ ನೀಡಿ : ಸಚಿವ ಕೆ.ಎಂ.ಶಿವಲಿಂಗೇಗೌಡ

• ಪ್ರಜೋದಯ ವರದಿ

**ಅರಸೀಕೆರೆ:** ಹೌಸಿಂಗ್ ಫಾರ್ ಆಲ್ ಯೋಜನೆಯಡಿ ಮನೆ ನಿರ್ಮಿಸಿಕೊಂಡಿರುವ ಫಲಾನುಭವಿಗಳು ಮನೆಗಳಲ್ಲಿ ವಾಸ ಮಾಡದಿದ್ದರೆ ಅವರ ಆಯ್ಕೆಯನ್ನು ಅಸಿಂಧುಗೊಳಿಸಿ ಬೇರೆಯವರಿಗೆ ನೀಡಲಾಗುತ್ತದೆ. ಅಂತಹವರು ತಮ್ಮ ಹಕ್ಕುಪತ್ರಗಳನ್ನು ನಗರಸಭೆಗೆ ಮರಳಿಸಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರು ಹೇಳಿದರು.

ನಗರದ ಸುಬ್ರಹ್ಮಣ್ಯ ಬೆಟ್ಟದ ತಪ್ಪಲಿನಲ್ಲಿ ಸೋಮವಾರ ಹೌಸಿಂಗ್ ಫಾರ್ ಆಲ್ ಯೋಜನೆಯಡಿ ನಿರ್ಮಿಸಿರುವ ಗುಂಪು ಮನೆಗಳ 2ನೇ ಹಂತದ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿ, ಆಯ್ಕೆಯಾಗಿರುವ ಫಲಾನುಭವಿಗಳು ತಮ್ಮ ಮನೆಗಳಲ್ಲಿ ವಾಸ ಮಾಡುತ್ತಿಲ್ಲದಿದ್ದರೆ ಅಂತಹವರಿಗೆ ನೋಟೀಸ್ ನೀಡಿ ಆದಾಗ್ಯೂ ಫಲಾನುಭವಿಗಳು ಬರದಿದ್ದರೆ ಆ ಮನೆಗಳನ್ನು ಅವಶ್ಯವಿರುವ ಬದಲಿ ಪಲಾನುಭವಿಗೆ ನೀಡುವ ನಿಟ್ಟಿನಲ್ಲಿ




ಅಗತ್ಯ ಕ್ರಮ ಕೈಗೊಳ್ಳಬೇಕೆಂದು ನಗರಸಭೆ ಪೌರಾಯುಕ್ತರಿಗೆ ಸೂಚಿಸಿದರು.

ಫಲಾನುಭವಿಯಿಂದ 1 ಲ.ರೂ., ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಸುಸಜ್ಜಿತ ಮನೆಗಳನ್ನು ನಿರ್ಮಿಸಲಾಗಿದೆ. ಶಾಶ್ವತ ಸೂರು ಒದಗಿಸಿದರೂ ನಿರಾಸಕ್ತಿ ತೋರುವುದು ಸರಿಯಲ್ಲ. ಈಗಾಗಲೇ ಆಯ್ಕೆಯಾಗಿರುವ ಮೊದಲ ಹಂತದ ಫಲಾನುಭವಿಗಳ ಪೈಕಿ ನೂರಕ್ಕೂ ಹೆಚ್ಚು ಪಲಾನುಭವಿಗಳು ತಮಗೆ ನಿಗದಿಯಾಗಿರುವ ಮನೆಗಳಲ್ಲಿ ವಾಸಿಸಲು ಇನ್ನೂ ಬಂದಿಲ್ಲ. ಮತ್ತೊಂದೆಡೆ ನಮಗೆ ಮನೆ ಕೊಡಿ ಎಂದು ನೂರಾರು ಮಂದಿ ನಿತ್ಯ ನಮ್ಮ ಮನೆ ಮತ್ತು ಕಚೇರಿಗೆ ಅಲೆಯುತ್ತಿದ್ದಾರೆ. ಮನೆಗೆ ಬರಲು ಇಷ್ಟವಿಲ್ಲದವರು ತಮ್ಮ ಹಕ್ಕುಪತ್ರವನ್ನು ವಾಪಾಸ್ ನೀಡಿದರೆ ಅವಶ್ಯವಿರುವ ಫಲಾನುಭವಿಗಳಿಗೆ ನೀಡಲಾಗುತ್ತದೆ. ಈ ನಿಟ್ಟಿನಲ್ಲಿ ಆಯುಕ್ತರು ತಮ್ಮ ಬಿಲ್ ಕಲೆಕ್ಟರ್ ಮೂಲಕ ಫಲಾನುಭವಿಗಳ ಮನೆಗೆ ಖುದ್ದು ಭೇಟಿ ನೀಡಿ ಅವರ ಅಭಿಪ್ರಾಯ ಸಂಗ್ರಹಿಸಬೇಕೆಂದರು.

ನಗರಸಭೆ ಮಾಜಿ ಅಧ್ಯಕ್ಷ ಎಂ. ಸಮೀವುಲ್ಲಾ ಅವರು ಮಾತನಾಡಿ, ಸಚಿವ ಶಿವಲಿಂಗೇಗೌಡರ ನಿರಂತರ ಹೋರಾಟದ ಫಲದಿಂದ ನೂರಾರು ಕುಟುಂಬಗಳು ಸ್ವಂತ ಸೂರಿನಲ್ಲಿ

» ನಾಲ್ಕನೇ ಪುಟದಲ್ಲಿ

## ಹಾಸನ ಹಾಲು ಒಕ್ಕೂಟದಲ್ಲಿ 2,713 ಕೋ.ರೂ. ವಹಿವಾಟು

### ಪ್ರತಿದಿನ 15 ಲಕ್ಷ ಲೀಟರ್ ಹಾಲು ಸಂಗ್ರಹ : ವಾರ್ಷಿಕ 26.74 ಕೋ.ರೂ. ಲಾಭ

• ಪ್ರಜೋದಯ ವರದಿ

**ಹಾಸನ:** ಹಾಸನ ಹಾಲು ಒಕ್ಕೂಟವು 2025-26ನೇ ಸಾಲಿನಲ್ಲಿ 2713.19 ಕೋ.ರೂ. ವಹಿವಾಟು ನಡೆಸುವ ಮೂಲಕ 26.74 ಕೋ.ರೂ. ಲಾಭಗಳಿಸಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.13.41 ರಷ್ಟು ವಹಿವಾಟು ಹೆಚ್ಚಳವಾಗಿದೆ ಎಂದು ಒಕ್ಕೂಟದ ಅಧ್ಯಕ್ಷರೂ ಆದ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ತಿಳಿಸಿದರು.

ನಗರದ ಡೇರಿ ಆವರಣದಲ್ಲಿ ಸೋಮವಾರ ನಡೆದ ಹಾಸನ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, 2026-27 ನೇ ಸಾಲಿಗೆ 3182.35 ಕೋ.ರೂ. ವಹಿವಾಟು ನಡೆಸುವ ಗುರಿ ಹೊಂದಲಾಗಿದ್ದು, 5.32 ಕೋ.ರೂ. ಗಳಷ್ಟು ನಿವ್ವಳ ಆದಾಯ ನಿರೀಕ್ಷಿಸಲಾಗಿದೆ ಎಂದು ಹೇಳಿದರು.

ಒಕ್ಕೂಟದಲ್ಲಿ ಪ್ರಸಕ್ತ ಸಾಲಿನಲ್ಲಿ ಗರಿಷ್ಠ 16.66 ಲಕ್ಷ ಲೀಟರ್ ಹಾಲು ಸಂಗ್ರಹಿಸುವ ಮೂಲಕ ನಿರೀಕ್ಷೆಯಂತೆ ಹಾಲು ಸಂಗ್ರಹಣೆ ಪ್ರಗತಿಯನ್ನು ಕಾಯ್ದುಕೊಳ್ಳಲಾಗಿದೆ. ಪ್ರಸ್ತುತದಲ್ಲಿ 1764 ಸಂಘಗಳಿಂದ ಪ್ರತಿದಿನ ಸರಾಸರಿ 15 ಲಕ್ಷ ಲೀಟರ್ ಹಾಲು ಸಂಗ್ರಹಿಸಲಾಗುತ್ತಿದೆ. ಒಕ್ಕೂಟದ ಬೈಲಾ ನಿಯಮಗಳಂತೆ ಸದಸ್ಯ ಸಂಘಗಳಿಗೆ 5.32 ಕೋಟಿ ಬೋನಸ್ ಮತ್ತು ಡಿವಿಡೆಂಡ್ ಹಂಚಿಕೆ ಮಾಡಲಾಗಿದೆ ಎಂದು ತಿಳಿಸಿದರು.

ಒಕ್ಕೂಟದ ವ್ಯಾಪ್ತಿಯಲ್ಲಿ ಪ್ರಸ್ತುತ 1,764 ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, 709 ಸಂಘಗಳು ಸ್ವಂತ ಕಟ್ಟಡ ಹೊಂದಿವೆ. ಸ್ವಂತ ಕಟ್ಟಡವನ್ನು ಹೊಂದಲು ಒಕ್ಕೂಟದಿಂದ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಪ್ರಸ್ತುತ ನೀಡುತ್ತಿರುವ 3 ಲಕ್ಷ ರೂ. ಸಹಾಯ ಧನವನ್ನು 4.50 ಲಕ್ಷ ರೂ.ಗೆ ಹೆಚ್ಚಿಸಲು ಈ ಬಾರಿಯ ಒಕ್ಕೂಟದ ಬೈಲಾ ತಿದ್ದುಪಡಿಗೆ ಅವಕಾಶ ಮಾಡಿಕೊಳ್ಳಲಾಗಿದೆ. ಒಕ್ಕೂಟದ ವ್ಯಾಪ್ತಿಯಲ್ಲಿ




" ಮಾರುಕಟ್ಟೆ ಕೊರತೆಯಿಂದಾಗಿ ಪ್ರತಿದಿನ 4.5 ರಿಂದ 5 ಲಕ್ಷ ಲೀಟರ್ ಹಾಲು ಉಳಿಯುತ್ತಿದ್ದು, ಪರಿಹಾರವಾಗಿ ಬೆಂಗಳೂರು ಮಾರುಕಟ್ಟೆ ಹಂಚಿಕೆ ಮಾಡಿಕೊಡುವ ಬಗ್ಗೆ ಕಳೆದ 12 ವರ್ಷಗಳಿಂದ ಕೆಎಂಎಫ್ ಮತ್ತು ಸರ್ಕಾರಕ್ಕೆ ಕೋರಿಕೆ ಸಲ್ಲಿಸುತ್ತಿದ್ದರೂ ಯಾವುದೇ ಸ್ಪಂದನೆ ಸಿಗುತ್ತಿಲ್ಲ.
-ಹೆಚ್.ಡಿ.ರೇವಣ್ಣ, ಅಧ್ಯಕ್ಷ, ಹಾಮೂಲ್

1665 ಸಂಘಗಳಲ್ಲಿ ಎಎಂಸಿಯು ಘಟಕಗಳು ಹಾಗು ಒಟ್ಟು 342 ಬಿ.ಎಂ.ಸಿ. ಘಟಕಗಳು ಕಾರ್ಯನಿರ್ವಹಿಸುತ್ತಿವೆ ಎಂದು ಹೇಳಿದರು.

2026-27 ರಿಂದ 2028-29 ರವರೆಗೆ ಒಟ್ಟು 1.25 ಲಕ್ಷ ರಾಸುಗಳನ್ನು ರಾಸು ವಿಮಾ ಯೋಜನೆಗೆ ಒಳಪಡಿಸಲು ಯೋಜಿಸಿದ್ದು, ರಾಸುವಿನ ಮೌಲ್ಯ 70 ಸಾವಿರ ರೂ. ಎಂದು ಪರಿಗಣಿಸಿ, ಒಕ್ಕೂಟ ಮತ್ತು ಹಾಮೂಲ್ ರೈತ ಕಲ್ಯಾಣ ಟ್ರಸ್ಟ್ ವತಿಯಿಂದ 24.72 ಕೋ.ರೂ. ಮೊತ್ತವನ್ನು ವಿಮೆ ಪ್ರೀಮಿಯಂಗಾಗಿ ಅನುದಾನ ನೀಡಲಾಗುತ್ತಿದೆ. 2025-26ನೇ ಸಾಲಿನಲ್ಲಿ ಒಕ್ಕೂಟದ 149 ಕ್ಲಸ್ಟರ್ ಎಐ ಕಾರ್ಯಕರ್ತರಿಗೆ ಆರೋಗ್ಯ ವಿಮೆ ಪಾಲಿಸಿ ಸೌಲಭ್ಯವನ್ನು ಒದಗಿಸಿಕೊಟ್ಟಿದ್ದು, ಅದಕ್ಕಾಗಿ 4.86 ಲ.ರೂ. ಭರಿಸಲಾಗಿದೆ. ಈ ಸೌಲಭ್ಯವನ್ನು 2026-27 ನೇ ಸಾಲಿಗೂ ವಿಸ್ತರಿಸಲಾಗುತ್ತಿದೆ ಎಂದರು.

ಶಾಸಕ ಸಿ.ಎನ್.ಬಾಲಕೃಷ್ಣ, ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಮಹೇಶ್, ನಿರ್ದೇಶಕರು ಹಾಜರಿದ್ದರು.

### 2027ಕ್ಕೆ ಮೆಗಾ ಡೇರಿ ಉದ್ಘಾಟನೆ

ನಗರದ ಕೈಗಾರಿಕಾ ಪ್ರದೇಶದಲ್ಲಿ 78 ಎಕರೆ ಜಾಗದಲ್ಲಿ 830.66 ಕೋ.ರೂ. ವೆಚ್ಚದ 10 ಲಕ್ಷ ಲೀ. ಸಾಮರ್ಥ್ಯದ ಮೆಗಾ ಡೇರಿ ನಿರ್ಮಾಣ ಹಾಗು 60 ಮೆ.ಟನ್ ಹಾಲಿನ ಪುಡಿ ಘಟಕ ನಿರ್ಮಾಣ ಕಾಮಗಾರಿ ಪೂರ್ಣಗೊಂಡು, ಟ್ರಯಲ್ ರನ್ ನಡೆಸಲಾಗಿದೆ. ಘಟಕದ ಉದ್ಘಾಟನೆ 2027 ಫೆಬ್ರವರಿಯೊಳಗೆ ನೆರವೇರಿಸಲಾಗುವುದು.

ಮೆಗಾ ಡೇರಿ ಆವರಣವನ್ನು ಆಕರ್ಷಕ ಪ್ರೇಕ್ಷಣೀಯ ಸ್ಥಳವಾಗಿ ನಿರ್ಮಾಣ ಮಾಡಲು 72.87 ಕೋ.ರೂ.ಗಳ ವೆಚ್ಚದಲ್ಲಿ ಥೀಮ್ ಪಾರ್ಕ್ ನಿರ್ಮಾಣ ಕಾರ್ಯ ನಡೆಯುತ್ತಿದೆ. ಈ ಪಾರ್ಕ್‌ನಲ್ಲಿ ಆಂಪಿ ಥಿಯೇಟರ್, ಮ್ಯೂಸಿಯಂ, ವಾಟರ್ ಫಾಲ್ಸ್, ಉದ್ಯಾನವನ ನಿರ್ಮಾಣ, ಸಂಗೀತ ಕಾರಂಜಿ, ಕೆಫೆಟೇರಿಯಾ ಇರಲಿದೆ ಎಂದು ರೇವಣ್ಣ ಅವರು ತಿಳಿಸಿದರು.

## ನದಿ ಪಾಲಾಗುತ್ತಿರುವ 4,500 ಕ್ಯೂಸೆಕ್ ಹೇಮಾವತಿ ನೀರು

-ಕೆ.ಪಿ.ಸಾಗರ್ ರಾಜು

- ಬರದ ನಡುವೆ ಹೊರ ಹರಿವು ಹೆಚ್ಚಳ
- ತಿಂಗಳಲ್ಲಿ 5 ಟಿಎಂಸಿಗೂ ಅಧಿಕ ನೀರು ಖಾಲಿ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಬರದ ಛಾಯೆ ಆವರಿಸಿ, ಮಳೆಯ ಕೊರತೆಯಿಂದ ಜಲಾಶಯಗಳ ನೀರಿನ ಸಂಗ್ರಹ ಕುಸಿಯುತ್ತಿರುವ ನಡುವೆಯೇ ಜಿಲ್ಲೆಯ ಹೇಮಾವತಿ ಜಲಾಶಯದಿಂದ ಭಾರೀ ಪ್ರಮಾಣದ ನೀರನ್ನು ನದಿಗೆ ಹರಿಸಲಾಗುತ್ತಿದೆ. ಕಳೆದ ನಾಲ್ಕೈದು ದಿನಗಳಿಂದ ಪ್ರತಿದಿನ 4,500 ಕ್ಯೂಸೆಕ್ ನೀರನ್ನು ನದಿಗೆ ಹರಿಸಿ, ಅಲ್ಲಿಂದ ಕೆಆರ್‌ಎಸ್ ಜಲಾಶಯದ ಮೂಲಕ ತಮಿಳುನಾಡಿಗೆ ಬಿಡಲಾಗುತ್ತಿದೆ.

ನಾಲೆಗಳಿಗೆ ನೀರು ಹರಿಸಿ ಕೆರೆ-ಕಟ್ಟೆಗಳನ್ನು ತುಂಬಿಸುವುದು ಅಗತ್ಯ. ಆದರೆ, ನಾಲೆಗಳಿಗೆ ಹರಿಸುವಷ್ಟೇ ಪ್ರಮಾಣದ ನೀರನ್ನು ನದಿಗೂ ಹರಿಸುವ ಕ್ರಮಕ್ಕೆ ರೈತರು ಹಾಗು ಸಾರ್ವಜನಿಕರಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ಜಿಲ್ಲೆಯಲ್ಲಿಯೇ ನೀರಿನ ಸಂಗ್ರಹ ಕಡಿಮೆಯಾಗುತ್ತಿರುವ ಸಂದರ್ಭದಲ್ಲಿ ನದಿ ಮೂಲಕ ಹೊರಹರಿವು ಹೆಚ್ಚಿಸಿರುವುದು ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಇನ್ನಷ್ಟು ಉಲ್ಬಣಿಸುವ ಆತಂಕಕ್ಕೆ ಕಾರಣವಾಗಿದೆ.

ತಿಂಗಳಲ್ಲಿ 5 ಟಿಎಂಸಿಗೂ ಅಧಿಕ ನೀರು ಖಾಲಿ



ಆ.9 ರಂದು ಹೇಮಾವತಿ ಜಲಾಶಯದಲ್ಲಿ 30.611 ಟಿಎಂಸಿ ನೀರಿನ ಸಂಗ್ರಹವಿತ್ತು. ಸೆ.7ರ ವೇಳೆಗೆ ಇದು 25.404 ಟಿಎಂಸಿಗೆ ಇಳಿಕೆಯಾಗಿದೆ. ಅಂದರೆ, ಒಂದು ತಿಂಗಳ ಅವಧಿಯಲ್ಲಿ 5.207 ಟಿಎಂಸಿ ನೀರು ಕಡಿಮೆಯಾಗಿದೆ. ಆ.1ರಂದು ಜಲಾಶಯದಿಂದ ಒಟ್ಟು ಹೊರ ಹರಿವು ಕೇವಲ 500 ಕ್ಯೂಸೆಕ್ ಇತ್ತು. ಸೆ.7ರ ವೇಳೆಗೆ 10,150 ಕ್ಯೂಸೆಕ್‌ಗೆ ಏರಿಕೆಯಾಗಿದೆ. ಅದರಲ್ಲಿ 5,650 ಕ್ಯೂಸೆಕ್ ನೀರನ್ನು ನಾಲೆಗಳಿಗೆ ಹಾಗು 4,500 ಕ್ಯೂಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ.

ನದಿಗೆ ಹರಿಯುವ ನೀರು ಕೃಷ್ಣರಾಜ ಸಾಗರ ಜಲಾಶಯ ಸೇರುತ್ತದೆ. ಅಲ್ಲಿಂದ ತಮಿಳುನಾಡಿಗೆ ನೀರು ಹರಿಯುವ ಹಿನ್ನಲೆ ಜಿಲ್ಲೆಯ ಜಲಾಶಯದ ನೀರನ್ನು ನದಿ ಮೂಲಕ

» ನಾಲ್ಕನೇ ಪುಟದಲ್ಲಿ

### ಜನರ ಕಣ್ಣಿಗೆ ಮಣ್ಣೆರಚುವ ಕೆಲಸ

ಜಿಲ್ಲೆಯಲ್ಲಿ ಕುಡಿಯುವ ನೀರಿನ ಭವಿಷ್ಯದ ಅಗತ್ಯವನ್ನು ಗಮನದಲ್ಲಿಟ್ಟುಕೊಂಡು ಜಲಾಶಯದ ನೀರನ್ನು ನಾಲೆಗಳಿಗೆ ಹರಿಸಬೇಕೆಂಬ ಒತ್ತಾಯ ಕೇಳಿ ಬಂದ ಹಿನ್ನಲೆ ನಾಲೆಗಳಿಗೆ ನೀರು ಹರಿಸಿ ಕೆರೆಕಟ್ಟೆಗಳನ್ನು ತುಂಬಿಸುವ ಕೆಲಸವಾಗುತ್ತಿದೆ, ನಾಲೆಗಳಿಗೆ ಹರಿಸುವ ಪ್ರಮಾಣದ ನೀರನ್ನು ನದಿಗೂ ಹರಿಸಿ ಹೊರ ರಾಜ್ಯಕ್ಕೆ ಹರಿದು ಹೋಗುವಂತೆ ಮಾಡುವುದು ಎಷ್ಟು ಸಮಂಜಸವೆಂಬ ಪ್ರಶ್ನೆ ಎದುರಾಗಿದೆ.

ಬೇಸಿಗೆ ಆರಂಭವಾಗುವ ಮುನ್ನವೇ ಜಲಾಶಯದ ನೀರಿನ ಸಂಗ್ರಹ 25 ಟಿಎಂಸಿ ಆಸುಪಾಸಿಗೆ ಇಳಿದಿರುವುದು ಆತಂಕಕ್ಕೆ ಕಾರಣವಾಗಿದೆ.

## ತಲೆ ಮೇಲೆ ಕಲ್ಲು ಹಾಕಿ ವ್ಯಕ್ತಿಯ ಬರ್ಬರ ಹತ್ಯೆ

• ಪ್ರಜೋದಯ ವರದಿ

**ಹಾಸನ:** ನಗರದಲ್ಲಿ ದುಷ್ಕರ್ಮಿಗಳು ವ್ಯಕ್ತಿಯ ತಲೆ ಮೇಲೆ ಕಲ್ಲು ಎತ್ತಿ ಹಾಕಿ ಬರ್ಬರವಾಗಿ ಕೊಲೆ ಮಾಡಿ ಪರಾರಿಯಾಗಿರುವ ಘಟನೆ ಚನ್ನಪಟ್ಟಣ ವೃತ್ತದ ಬಳಿ ಸೋಮವಾರ ನಡೆದಿದೆ.



ತಾಲ್ಲೂಕಿನ ಕಟ್ಟಾಯ ಹೋಬಳಿ ಕಲ್ಲಹಳ್ಳಿ ಗ್ರಾಮದ ಮಣಿ ಅಲಿಯಾಸ್ ಮಣಿಕಂಠ (35) ಕೊಲೆಯಾದ ವ್ಯಕ್ತಿ.

ಸಿದ್ದಯ್ಯ ನಗರದಲ್ಲಿ ವಾಸವಾಗಿದ್ದ ಮಣಿಕಂಠ, 80 ಅಡಿ ರಸ್ತೆಯಲ್ಲಿರುವ ಭರತ್ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡುವ ಜೊತೆಗೆ ಆಟೋ ಓಡಿಸಿಕೊಂಡಿದ್ದ. ಸೋಮವಾರ ಮಧ್ಯಾಹ್ನ ವೇಳೆಗೆ ಗೃಹಪ್ರವೇಶ ಕಾರ್ಯ ಇದೆ ಎಂದು ತಿಳಿಸಿ ಪೆಟ್ರೋಲ್ ಬಂಕ್‌ನಿಂದ ಬೈಕ್‌ನಲ್ಲಿ ನಗರದ ಎಪಿಎಂಸಿವರೆಗೆ ಡ್ರಾಪ್ ತೆಗೆದು ಕೊಂಡಿದ್ದ. ಬಳಿಕ ಬಾರ್‌ವೊಂದರಲ್ಲಿ ಮದ್ಯ ಸೇವನೆ ಮಾಡುತ್ತಿದ್ದ ವೇಳೆ ಅಲ್ಲಿ ಜಗಳ ನಡೆದಿದೆ ಎನ್ನಲಾಗಿದೆ. ಈ ವೇಳೆ ದುಷ್ಕರ್ಮಿಗಳು ಮಣಿಕಂಠನ ಮೇಲೆ ಬಿಯರ್ ಬಾಟಲಿಯಿಂದ ಹಲ್ಲೆ ಮಾಡಿ, ತಲೆ ಯ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಿ ಪರಾರಿಯಾಗಿದ್ದಾರೆ. ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತ ಹಾಗು ಸೋಕೋ ತಂಡ ಪರಿಶೀಲನೆ ನಡೆಸಿತು. ಕೊಲೆಗೆ ನಿಖರ ಕಾರಣ ತಿಳಿದು ಬಂದಿಲ್ಲ, ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತ ಅವರು ಪ್ರತಿಕ್ರಿಯಿಸಿ, ಕೊಲೆ ಕಾರಣ ತಿಳಿದು ಬಂದಿಲ್ಲ. ಪ್ರಾಥಮಿಕ ಮಾಹಿತಿ ಪ್ರಕಾರ ಬಿಯರ್ ಬಾಟಲಿ ಹಾಗು ಕಲ್ಲಿನಿಂದ ಹೊಡೆದು ಕೊಲೆ ಮಾಡಿರುವುದು ಕಂಡು ಬಂದಿದೆ. ಮರಣೋತ್ತರ ವೈದ್ಯಕೀಯ ಪರೀಕ್ಷೆ ಬಳಿಕ ನಿಖರ ಕಾರಣ ತಿಳಿಯಲಿದೆ. ಆರೋಪಿಗಳನ್ನು ಶೀಘ್ರದಲ್ಲೇ ಬಂಧಿಸುವುದಾಗಿ ತಿಳಿಸಿದರು.

## ಪೂಜೆಗೆ ಅರ್ಚಕರ ನಡುವೆ ಜಟಾಪಟಿ

### ಮಳಲಿ ಲಕ್ಷ್ಮೀದೇವಿ ದೇವಾಲಯಕ್ಕೆ ಬೀಗ ಹಾಕಿ ಪ್ರತಿಭಟನೆ | ತಹಶೀಲ್ದಾರ್ ಮಧ್ಯಪ್ರವೇಶ

• ಪ್ರಜೋದಯ ವರದಿ

**ಹಾಸನ:** ಹೊಳೆನರಸೀಪುರ ತಾಲ್ಲೂಕಿನ ಮಳಲಿ ಶ್ರೀ ಲಕ್ಷ್ಮೀದೇವಿ (ಗಿಡ್ಡಮ್ಮ) ಪೂಜೆ ಮಾಡುವ ವಿಚಾರಕ್ಕೆ ಅರ್ಚಕರ ನಡುವೆ ಜಟಾಪಟಿ ನಡೆದು ದೇವಾಲಯಕ್ಕೆ ಬೀಗ ಹಾಕಿದ ಪರಿಣಾಮ ತಹಸೀಲ್ದಾರ್ ಮಧ್ಯೆ ಪ್ರವೇಶಿಸಿ ಸಮಸ್ಯೆ ಬಗೆಹರಿಸಿದ್ದಾರೆ.

ಹಿಂದಿನಿಂದಲೂ ಯಾದವ ಸಮುದಾಯಕ್ಕೆ ಸೇರಿದ 24 ಕುಟುಂಬಗಳು ದೇವಸ್ಥಾನದ ಪೂಜಾ ಕೈಂಕರ್ಯ ನಡೆಸುತ್ತಿದ್ದು, ಈ ಬಾರಿ 6 ಕುಟುಂಬಗಳಿಗೆ ಮಾತ್ರ ಉಪವಿಭಾಗಾಧಿಕಾರಿ ಅವಕಾಶ ನೀಡಿದ್ದರು. ಇದರಿಂದ ಉಳಿದ ಅರ್ಚಕರ ಕುಟುಂಬಗಳು ದೇವಾಲಯಕ್ಕೆ ಬೀಗ ಹಾಕಿ ಪ್ರತಿಭಟನೆ ನಡೆಸಿದರು. ಬಳಿಕ ತಹಶೀಲ್ದಾರ್ ಆಗಮಿಸಿ 15 ದಿನದಲ್ಲಿ ಉಳಿದವರಿಗೆ ಪೂಜಾ ಕಾರ್ಯ ನಡೆಸಲು ಅವಕಾಶ ನೀಡಲಾಗುವುದೆಂದು ಭರವಸೆ ನೀಡಿದ ನಂತರ ಪ್ರತಿಭಟನೆ ಹಿಂಪಡೆದು ದೇವಾಲಯದ ಬೀಗ ತೆರೆದು ಪೂಜೆ ನಡೆಸಲು ಅವಕಾಶ ಮಾಡಿಕೊಟ್ಟರು.



**15 ದಿನಕ್ಕೆ ಒಂದು ಕುಟುಂಬಕ್ಕೆ ಅವಕಾಶ**

ಹಿಂದಿನಿಂದಲೂ ಯಾದವ (ಗೊಲ್ಲರು) ಸಮುದಾಯಕ್ಕೆ ಸೇರಿದ 24 ಕುಟುಂಬಗಳು ಹದಿನೈದು ದಿನಗಳಿಗೆ ಒಂದು ಕುಟುಂಬದಂತೆ ದೇವಾಲಯದಲ್ಲಿ ಪೂಜೆ ಸಲ್ಲಿಸುತ್ತಿದ್ದಾರೆ. ಮುಜರಾಯಿ ಇಲಾಖೆಗೆ ಸೇರಿದ ದೇವಾಲಯ ಆಗಿರುವುದರಿಂದ ವರ್ಷಕ್ಕೊಮ್ಮೆ ತಹಶೀಲ್ದಾರ್ ಕಚೇರಿಗೆ ಕುಟುಂಬದ

» ನಾಲ್ಕನೇ ಪುಟದಲ್ಲಿ

## ಮದ್ಯ ನೀಡಲಿಲ್ಲವೆಂದು ಕ್ಯಾಷಿಯರ್ ಮೇಲೆ ಹಲ್ಲೆ

• ಪ್ರಜೋದಯ ವರದಿ

**ಹಾಸನ:** ಕೇಳಿದ ಮದ್ಯ ಇಲ್ಲವೆಂದು ಹೇಳಿದ್ದಕ್ಕೆ ವೈನ್ಸ್ ಶಾಪ್ ಕ್ಯಾಷಿಯರ್ ಮೇಲೆ ಇಬ್ಬರು ಯುವಕರು ಹಲ್ಲೆ ನಡೆಸಿರುವ ಘಟನೆ ತಾಲ್ಲೂಕಿನ ಕೋರವಂಗಲ ಗೇಟ್‌ನಲ್ಲಿ ನಡೆದಿದೆ.

ಕೋರವಂಗಲ ಗೇಟ್‌ನಲ್ಲಿರುವ ಗಂಗಾ ವೈನ್ಸ್‌ಗೆ ಹೆಚ್.ಮೈಲನಹಳ್ಳಿ ಗ್ರಾಮದ ಕೀರ್ತಿ ಹಾಗು ಚಿಕ್ಕಕಡಲೂರು ಗ್ರಾಮದ ಸಂಜಯ್ ಬಂದು ತಮಗೆ ಬೇಕಾದ ಮದ್ಯ ನೀಡುವಂತೆ ವೈನ್ಸ್ ಕ್ಯಾಷಿಯರ್ ಕುಮಾರಸ್ವಾಮಿ ಅವರನ್ನು ಕೇಳಿದ್ದಾರೆ. ಅವರು ಕೇಳುತ್ತಿದ್ದ ಮದ್ಯ ಲಭ್ಯವಿಲ್ಲವೆಂದು ತಿಳಿಸಿದಾಗ ಕೀರ್ತಿ ಹಾಗು ಸಂಜಯ್ ಕ್ಯಾಷಿಯರ್ ಕುಮಾರಸ್ವಾಮಿ ಅವರೊಂದಿಗೆ ಜಗಳ ತೆಗೆದಿದ್ದಾರೆ. ಬಳಿಕ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ನಡೆಸಿದ್ದಾರೆ. ಹಲ್ಲೆ ನಡೆಸಿರುವ ದೃಶ್ಯಗಳು ವೈನ್ಸ್‌ನಲ್ಲಿದ್ದ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ. ಘಟನೆ ಸಂಬಂಧ ಕ್ಯಾಷಿಯರ್ ಕುಮಾರಸ್ವಾಮಿ ದುದ್ದ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

### ಹಾಸನದಲ್ಲಿ ಮಲೆನಾಡ ಗಾಂಧಿಯ ಜನ್ಮ ಶತಮಾನೋತ್ಸವದಲ್ಲಿ ಚಿಂತಕ ಸುಧೀರ್ ಕುಮಾರ್ ಸ್ಮರಣೆ

# ಲಕ್ಷಾಂತರ ಜನರ ಬದುಕಿಗೆ ಬೆಳಕಾದ ಗೋವಿಂದೇಗೌಡರು

• ಪ್ರಜೋದಯ ವರದಿ

**ಹಾಸನ:** ಸರ್ಕಾರಿ ನೌಕರಿ ಪಡೆಯಲು ಲಂಚ ನೀಡಲೇಬೇಕೆಂಬ ಸಂದಿಗ್ಧ ಪರಿಸ್ಥಿತಿ ಇರುವಾಗ ಒಂದು ರೂಪಾಯಿ ಲಂಚವಿಲ್ಲದೆ ಲಕ್ಷಾಂತರ ಅಭ್ಯರ್ಥಿಗಳಿಗೆ ಶಿಕ್ಷಕ ವೃತ್ತಿ ಕಲ್ಪಿಸಿಕೊಟ್ಟ ದಿ. ಮಾಜಿಸಚಿವಹೆಚ್.ಜಿ.ಗೋವಿಂದೇಗೌಡರನ್ನು ನೆನೆಯಲೇಬೇಕೆಂದು ಸಂಸ್ಕೃತಿ ಚಿಂತಕ ಹಾಗು ವಕೀಲ ಸುಧೀರ್ ಕುಮಾರ್ ಮುರೊಳ್ಳಿ ಅವರ ಹೇಳಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕ, ವೈಜ್ಞಾನಿಕ ಮತ್ತು ಸಂಶೋಧನಾ ಪರಿಷತ್ ವತಿಯಿಂದ ನಗರದ ಗಾಂಧಿ ಭವನದಲ್ಲಿ ಸೋಮವಾರ ನಡೆದ ಮಲೆನಾಡ ಗಾಂಧಿ, ಮಾಜಿ ಶಿಕ್ಷಣ ಸಚಿವ ಹೆಚ್.ಜಿ.ಗೋವಿಂದೇಗೌಡ ಶತಮಾನೋತ್ಸವ ಸಮಾರಂಭದಲ್ಲಿ ಉಪನ್ಯಾಸ ನೀಡಿದ ಅವರು, ಜೆನ್ ಜಿಗಳು ಕೇವಲ ಸಾಮಾಜಿಕ ಜಾಲತಾಣಗಳಿಗಷ್ಟೇ ಸೀಮಿತರಾಗಿ ವಾಟ್ಸಾಪ್‌ಗೆ ಬರುವ ಸಂದೇಶಗಳನ್ನು ಫಾರ್ವರ್ಡ್ ಮಾಡುತ್ತಾ ಕಾಲ ಕಳೆಯುತ್ತಿದ್ದಾರೆ. ಯಾರಿಗಾದರೂ ರಕ್ತದ ಅವಶ್ಯಕತೆ ಇದೆ ಎಂದರೆ ನಾನು ಅಥವಾ ಕುಟುಂಬದ ಯಾರಾದರೂ ದಾನ ಮಾಡಬಹುದೇ ಎಂದು ಯೋಚಿಸುವ ಬದಲು ಆ ಸಂದೇಶವನ್ನು ಇನ್ನೊಬ್ಬರಿಗೆ ರವಾನಿಸಿ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಾರೆ. ಆದರೆ, ಯಾವ ಪ್ರತಿಫಲ ಬಯಸದೆ ಲಕ್ಷಾಂತರ ಜನರಿಗೆ ಬೆಳಕಾದವರು ಗೋವಿಂದೇಗೌಡರು. ತನ್ನ ಮಗಳಿಗೆ ಉದ್ಯೋಗ ಕೊಡಿಸಲು ಉನ್ನತ ಹುದ್ದೆಯಲ್ಲಿದ್ದುಕೊಂಡು ಅಕ್ರಮ ಎಸಗಿದವರ ಮಧ್ಯೆ ಗೋವಿಂದೇಗೌಡರು ವಿಭಿನ್ನವಾಗಿ ಕಾಣಿಸುತ್ತಾರೆಂದು ಕೆಪಿಎಸ್‌ಸಿ ಮಾಜಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ್ ಹೆಸರು ಹೇಳದೆ ವಾಗ್ದಾಳಿ ನಡೆಸಿದರು.

» ನಾಲ್ಕನೇ ಪುಟದಲ್ಲಿ




### ಪ್ರಾಮಾಣಿಕತೆಯಿಂದ ಗಮನ ಸೆಳೆದ ವ್ಯಕ್ತಿ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್. ಕೆಂಚೇಗೌಡ ಅವರು, ಹೆಚ್.ಜಿ.ಗೋವಿಂದೇಗೌಡರು ನಾವು ಪಾಲಿಸಬೇಕಾದಂತಹ ಮೌಲ್ಯ ಉಳಿಸಿ ಲಕ್ಷಾಂತರ ಶಿಕ್ಷಕರ ಪಾಲಿಗೆ ದೇವರಾಗಿದ್ದಾರೆ. ಹಾಸನದ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು, ಚಿಕ್ಕಮಗಳೂರು ಜಿಲ್ಲೆಯ ಹೆಚ್.ಜಿ.ಗೋವಿಂದೇಗೌಡರು, ಶಿವಮೊಗ್ಗಾದ ಶಾಂತವೀರ ಗೋಪಾಲೇಗೌಡ, ಕಡಿದಾಳ್ ಮಂಜಪ್ಪ, ಕಾಗೋಡು ತಿಮ್ಮಪ್ಪ ತಮ್ಮದೇಯಾದ ಹೋರಾಟಗಳ ಮೂಲಕ ಛಾಪು ಮೂಡಿಸಿದ್ದಾರೆ.

ಶಾಲಾ ಶಿಕ್ಷಕರ ನೇಮಕಾತಿ ಪ್ರಕ್ರಿಯೆಗೆ ಹಾಸನದಲ್ಲೇ ಚಾಲನೆ ನೀಡಲಾಯಿತು. ಆಗ ಒಂದು ಹುದ್ದೆಗೆ 3 ಸಾವಿರ ರೂ. ವರೆಗೆ ನೀಡಬೇಕಿತ್ತು. ಆದರೆ, ಗೋವಿಂದೇಗೌಡರು ಅರ್ಹ ಅಭ್ಯರ್ಥಿಗಳಿಂದ ಹಣ ಪಡೆಯದೆ ಉದ್ಯೋಗ ಕಲ್ಪಿಸುವ ಮೂಲಕ ಮಾದರಿಯಾಗಿದ್ದಾರೆಂದರು.

### ಮೌಲ್ಯಯುತ ರಾಜಕಾರಣಿ ಗೋವಿಂದೇಗೌಡರು

ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ ಅವರು ಮಾತನಾಡಿ, ಗೋವಿಂದೇಗೌಡರಂತಹ ಸಾಧಕರ ಬಗ್ಗೆ ತಿಳಿದಾಗ ನಮ್ಮ ವ್ಯಕ್ತಿತ್ವಕ್ಕೂ ಗೌರವ ಬರುವುದರ ಜೊತೆಗೆ ನಮ್ಮ ಮೌಲ್ಯವೂ ಹೆಚ್ಚಾಗಿ ಸೇವೆ ಮಾಡುವ ವಿಶ್ವಾಸ ಮೂಡುತ್ತದೆ ಎಂದರು.

ಗೋವಿಂದೇಗೌಡರು ಗಾಂಧೀಜಿ ಅವರ ಕೊನೆಯ ಕೊಂಡಿ ಎಂದು ಸಾಹಿತಿ ಪೂರ್ಣಚಂದ್ರ ತೇಜಸ್ವಿ ಅವರೇ ಬರೆದಿದ್ದಾರೆ. ಇತಿಹಾಸದಲ್ಲಿ ನಮಗೆ ಇಂತಹವರು ಆದರ್ಶ ಎನ್ನಬಹುದು, ಆದರೆ ಯಾರಿಗೆ, ಯಾವ ಸ್ಥಾನ ಎಂಬುದನ್ನು ಇತಿಹಾಸವೇ ಹೇಳಲಿದೆ. ಈಗಿನ ದಿನಮಾನಗಳಲ್ಲಿ ವ್ಯವಸ್ಥೆಯನ್ನು ಬದಲಾಯಿಸುವುದು ಅಷ್ಟು ಸುಲಭವಲ್ಲ. ಆದರೆ ಗೋವಿಂದೇಗೌಡರು ತಾವೇ ಅಧ್ಯಯನ ಮಾಡಿ ಆಗಿನ ಸರ್ಕಾರವನ್ನು ಒಪ್ಪಿಸಿ ಶಿಕ್ಷಕರ ನೇಮಕಾತಿಗೆ ಕಾನೂನು ಜಾರಿಗೊಳಿಸಿದರು ಎಂಬುದು ಹೆಮ್ಮೆಯ ವಿಷಯ. ಮೌಲ್ಯಯುತ ರಾಜಕಾರಣಿ ಹೇಗಿರಬೇಕು ಎಂಬುದಕ್ಕೆ ಅವರೇ ಉದಾಹರಣೆ. ನುಡಿದಂತೆ ನಡೆದವರು, ಇಂತಹ ಸಾಧಕರ ಬಗ್ಗೆ ನಾವೆಲ್ಲರೂ ಓದಿ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದರು.

ಶಿಕ್ಷಕರ ನೇಮಕಾತಿ ವಿಚಾರದಲ್ಲಿ ಅವರು ತಮ್ಮದೇ ಸರ್ಕಾರದ ವಿರುದ್ಧ ಹೋರಾಡಿದ್ದಾರೆ. ಸಾಕಷ್ಟು ಸಂಕಷ್ಟಗಳನ್ನು ಎದುರಿಸಿದ್ದಾರೆ. ಪರ-ವಿರೋಧಗಳ ನಡುವೆ ಅಂದುಕೊಂಡದ್ದನ್ನು ಸಾಧಿಸಿದ ಮಹಾನ್ ನಾಯಕ ಅವರಾಗಿದ್ದಾರೆಂದರು.

## ಇಂದು ವಿಶ್ವ ಜಾನಪದ ದಿನಾಚರಣೆ

• ಪ್ರಜೋದಯ ವರದಿ

**ಹಾಸನ :** ನಗರದ ಎಸ್‌ಆರ್‌ಎಸ್ ಪ್ರಜ್ಞಾ ವಿದ್ಯಾಶಾಲೆಯ ಸಭಾಂಗಣದಲ್ಲಿ ವಿಶ್ವ ಜಾನಪದ ದಿನಾಚರಣೆ ಮತ್ತು ಜಾನಪದ ವೈಭವ ದಿನಾಚರಣೆ ಸಮಾರಂಭವನ್ನು ಸೆ.8 ರಂದು ಬೆಳಿಗ್ಗೆ 11 ಗಂಟೆಗೆ ಆಯೋಜಿಸಲಾಗಿದೆ.

ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಕೆ.ಎನ್.ಬಲರಾಮ್ ಅವರು ಕಾರ್ಯಕ್ರಮದ ಉದ್ಘಾಟನೆ ಮಾಡಲಿದ್ದಾರೆ. ಕರ್ನಾಟಕ ಜಾನಪದ ಪರಿಷತ್ತು ಜಿಲ್ಲಾ ಘಟಕದ ಅಧ್ಯಕ್ಷ ಹಂಪನಹಳ್ಳಿ ತಿಮ್ಮೇಗೌಡ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಸಾಹಿತಿ ಮೇಟಿಕೆರೆ ಹಿರಿಯಣ್ಣ, ಎಸ್‌ಆರ್‌ಎಸ್ ಪ್ರಜ್ಞಾ ವಿದ್ಯಾ ಶಾಲೆ ಕಾರ್ಯದರ್ಶಿ ಎಂ.ನಟರಾಜ್, ಹಿರಿಯ ಜಾನಪದ ಕಲಾವಿದರಾದ ಶಿವನಗೌಡ ಪಾಟೀಲ್, ಗ್ಯಾರಂಟಿ ರಾಮಣ್ಣ, ಯೋಗೇಂದ್ರ, ದುದ್ದ, ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯರಾದ ದೇವಾನಂದ ವರಪ್ರಸಾದ್ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಭಾಗವಹಿಸಲಿರುವರು.

# ಮುಂದೊಂದು ದಿನ ಮರಳಿಗಾಗಿ ಯುದ್ಧ!

**ಮರುಭೂಮಿಯಲ್ಲಿ ಅಷ್ಟೊಂದು ಮರಳು ಇದ್ದಾಗ ಅದನ್ನೇ ಬಳಸಿಕೊಳ್ಳಬಹುದಲ್ಲ, ಆಮದು ಮಾಡಿಕೊಳ್ಳುವುದು ಏಕೆ ಎಂಬ ಪ್ರಶ್ನೆ ಸ್ವಾಭಾವಿಕ. ನಾನು ರಜೆಯಲ್ಲಿ ಭಾರತಕ್ಕೆ ಬಂದಾಗ, ಸಂಬಂಧಿಗಳು, ಮಿತ್ರರು ಸಾಮಾನ್ಯವಾಗಿ ಮೂರು ಪ್ರಶ್ನೆ ಕೇಳುತ್ತಾರೆ. ಮೊದಲನೆಯದು, ಕೊಲ್ಲಿ ರಾಷ್ಟ್ರಗಳಲ್ಲಿ ಯಾವೆಲ್ಲ ತರಕಾರಿ, ಹಣ್ಣುಗಳು ಸಿಗುತ್ತವೆ ಎಂಬುದು.**

ವಿದೇಶವಾಸಿ

ಇನ್ನು ಕೆಲವೇ ವರ್ಷಗಳಲ್ಲಿ ನಮ್ಮ ಮುಂದೆ ಇನ್ನೊಂದು ದೊಡ್ಡ ಸಮಸ್ಯೆ ಎದುರಾಗಲಿದೆ. ಏನು ಗೊತ್ತೇ? ಮರಳು! ನಿಜ, ಮಾನವ ಗಾಳಿ ಮತ್ತು ನೀರಿನ ನಂತರ ಅತಿ ಹೆಚ್ಚು ಬಳಸುವುದು ಏನನ್ನು? ಆಹಾರ... ಬಟ್ಟೆ... ವಾಹನ... ತೈಲ... ಊಹೂ. ಅದ್ಯಾವುದೂ ಅಲ್ಲ. ಮೂರನೆಯ ಸ್ಥಾನದಲ್ಲಿ ಮನುಷ್ಯ ಬಳಸುವುದು ಮರಳು. ಪರಿಸ್ಥಿತಿ ಹೀಗೆ ಮುಂದುವರಿದರೆ, ನಮ್ಮ ನಿತ್ಯ ಜೀವನದಲ್ಲಿ ಹಾಸುಹೊಕ್ಕಿರುವ ಮರಳು, ಮುಂದೊಂದು ದಿನ ಮರೀಚಿಕೆಯಾದರೂ ಆಶ್ಚರ್ಯಪಡಬೇಕಾಗಿಲ್ಲ.

ನಮಗೆಲ್ಲ ತಿಳಿದಿರುವಂತೆ ಪೂರ್ವ ಏಷ್ಯಾದ ದೇಶಗಳ ಆರ್ಥಿಕವಾಗಿ ಬಲಿಷ್ಠವಾದ ದೇಶ ಎಂದರೆ ಸಿಂಗಾಪುರ. ಕಳೆದ ಕೆಲವು ದಶಕಗಳಲ್ಲಿ ಸಿಂಗಾಪುರ ಬೆಳೆದಷ್ಟು ಅದರ ಸುತ್ತಮುತ್ತಲಿನ ಯಾವ ದೇಶವೂ ಬೆಳೆದಿಲ್ಲ. ಆರ್ಥಿಕವಾಗಿಯೂ ಹೌದು, ಭೌಗೋಳಿಕವಾಗಿಯೂ ಹೌದು. ಎರಡು ನೂರು ವರ್ಷಗಳ ಹಿಂದೆ ಐದುನೂರ ಎಪ್ಪತ್ತೆಂಟು ಚದರ ಕಿಲೋ ಮೀಟರ್ ವಿಸ್ತೀರ್ಣ ಹೊಂದಿದ್ದ ದೇಶ ಇಂದು ಏಳುನೂರ ಇಪ್ಪತ್ತು ಚದರ ಕಿಲೋಮೀಟರ್ ವಿಸ್ತೀರ್ಣ ಹೊಂದಿದೆ ಅಂದರೆ, ಭೂಮಿಯಲ್ಲಿ ಸುಮಾರು ಇಪ್ಪತ್ತೈದು ಪ್ರತಿಶತ ವೃದ್ಧಿಸಿದೆ.

ಇದು ಸಮುದ್ರವನ್ನು ತುಂಬಿ ಸೃಷ್ಟಿಸಿದ ಕೃತಕ ಭೂಮಿ. ಅಷ್ಟು ತುಂಬಲು ಆ ದೇಶದ ಬಳಿ ಸರಕು ಇತ್ತೇ ಎಂದು ಕೇಳಿದರೆ, ಉತ್ತರ, ಖಂಡಿತ ಇಲ್ಲ! ಬರೀ ಸಮುದ್ರವನ್ನು ಹಿಮ್ಮೆಟ್ಟಿಸಿದರೆ ಏನು ಪ್ರಯೋಜನ? ಸಮುದ್ರ ತಟದಲ್ಲಿ ಉಳಿಯುವ ಹುಚ್ಚಿರುವ ಜನರಿಗೆ ಉಳಿಯಲು ಮನೆ, ಸಂಚಾರಕ್ಕೆ ರಸ್ತೆ, ಇತರ ಸೌಲಭ್ಯಗಳೂ ಆಗಬೇಕು.

ಅದಕ್ಕೆ ಕಾಂಕ್ರೀಟ್, ಗ್ಲಾಸ್, ಪೇಂಟ್ ಇತ್ಯಾದಿಗಳೂ ಬೇಕು. ಅದಕ್ಕೆಲ್ಲ ಪ್ರಮುಖವಾಗಿ ಬೇಕಾದದ್ದು ಮರಳು. ಪ್ರತಿನಿತ್ಯ ಎದ್ದೇಳುವ ಗಗನಚುಂಬಿ ಕಟ್ಟಡಗಳಿಗೆ ಪೂರೈಸುವಷ್ಟು ಮರಳು ಆ ದೇಶದಲ್ಲಿಲ್ಲ. ನಿಮಗೆ ತಿಳಿದಿರಲಿ, ವಿಸ್ತೀರ್ಣದಲ್ಲಿ ಬೆಂಗಳೂರು ನಗರಕ್ಕಿಂತಲೂ ಚಿಕ್ಕದಾದ ಸಿಂಗಾಪುರ ದೇಶ ಮಲೇಷ್ಯಾ, ಕಾಂಬೋಡಿಯಾ ಮತ್ತು ಇಂಡೋನೇಷ್ಯಾದಿಂದ ಮರಳನ್ನು ಆಮದು ಮಾಡಿಕೊಳ್ಳುತ್ತಿದೆ. ಆ ದೇಶಗಳಿಗೆ ಅದ್ಯಾವ ಅನಿವಾರ್ಯವೋ, ಅವಶ್ಯಕತೆಯೋ ಗೊತ್ತಿಲ್ಲ, ಮುಂದೆ ಆಗಬಹುದಾದ ಅನಾಹುತವನ್ನು ಲೆಕ್ಕಿಸದೇ ಪೂರೈಸುತ್ತಿವೆ. ಇದ್ದದ್ದರಲ್ಲಿ ಇಂಡೋನೇಷ್ಯಾ ಸ್ವಲ್ಪ ಎಚ್ಚೆತ್ತುಕೊಂಡು ನದಿ ಮೂಲದ ಮರಳಿನ ರಫ್ತನ್ನು ನಿಲ್ಲಿಸಿದೆ.



ಇದು ಒಂದು ದೇಶದ ಕಥೆಯಲ್ಲ, ಮರಳಿನ ರಾಶಿಯನ್ನೇ ಮೈತುಂಬ ಹೊದ್ದುಕೊಂಡಿರುವ ಕೊಲ್ಲಿ ರಾಷ್ಟ್ರಗಳೂ ಕೂಡ ಮರಳನ್ನು ಆಮದು ಮಾಡಿಕೊಳ್ಳುತ್ತವೆ ಎಂದರೆ ನಂಬಲೇಬೇಕು. ನಮ್ಮ ಭೂಮಿಯ ಶೇಕಡಾ ಮೂವತ್ತೈದರಷ್ಟು ಭಾಗ ಮರುಭೂಮಿ ಅಥವಾ ಮರಳಿನಿಂದ ಆವರಿಸಿ ಕೊಂಡಿದೆ.

ಸಹಾರಾ ಮರುಭೂಮಿಯೊಂದೇ ಸುಮಾರು ತೊಂಬತ್ತೆರಡು ಲಕ್ಷ ಚದರ ಕಿಲೋಮೀಟರ್‌ನಷ್ಟು ಹರಡಿಕೊಂಡಿದೆ. ಕೊಲ್ಲಿ ರಾಷ್ಟ್ರಗಳ ಶೇಕಡಾ ತೊಂಬತ್ತಕ್ಕೂ ಹೆಚ್ಚು ಭಾಗ ಮರುಭೂಮಿ. ಆದರೂ ಆ ದೇಶಗಳು ಮರಳನ್ನು ಆಮದು ಮಾಡಿಕೊಳ್ಳುವುದು ಸುಮಾರು ಹತ್ತು ಸಾವಿರ ಕಿಲೋಮೀಟರ್ ದೂರದಲ್ಲಿರುವ ಆಸ್ಟ್ರೇಲಿಯಾದಿಂದ. ಬಿಟ್ಟರೆ ಅಷ್ಟೇ ದೂರದಲ್ಲಿರುವ ಕೆನಡಾದಿಂದ. ಉದಾ ಹರಣೆಯಾಗಿ ದುಬೈನಲ್ಲಿರುವ ಎಂಟುನೂರು ಮೂವತ್ತು ಮೀಟರ್ ಎತ್ತರದ ಬುರ್ಜ್ ಖಲೀಫಾ ನೋಡಿ. ಆ ಕಟ್ಟಡ ನಿರ್ಮಾಣಕ್ಕೆ ಬಳಸಿದ ಸಂಪೂರ್ಣ ಮರಳು ಆಸ್ಟ್ರೇಲಿಯಾದಿಂದ ಆಮದು ಮಾಡಿಕೊಂಡದ್ದು!

ಮರುಭೂಮಿಯಲ್ಲಿ ಅಷ್ಟೊಂದು ಮರಳು ಇದ್ದಾಗ ಅದನ್ನೇ ಬಳಸಿಕೊಳ್ಳಬಹುದಲ್ಲ, ಆಮದು ಮಾಡಿಕೊಳ್ಳುವುದು ಏಕೆ ಎಂಬ ಪ್ರಶ್ನೆ ಸ್ವಾಭಾವಿಕ. ನಾನು ರಜೆಯಲ್ಲಿ ಭಾರತಕ್ಕೆ ಬಂದಾಗ, ಸಂಬಂಧಿಗಳು, ಮಿತ್ರರು ಸಾಮಾನ್ಯವಾಗಿ ಮೂರು ಪ್ರಶ್ನೆ ಕೇಳುತ್ತಾರೆ. ಮೊದಲನೆಯದು, ಕೊಲ್ಲಿ ರಾಷ್ಟ್ರಗಳಲ್ಲಿ ಯಾವೆಲ್ಲ ತರಕಾರಿ, ಹಣ್ಣುಗಳು ಸಿಗುತ್ತವೆ ಎಂಬುದು. ಎರಡನೆಯದು, ಅಲ್ಲಿ ಪೆಟ್ರೋಲ್ ಬೆಲೆ ಎಷ್ಟು ಎಂದು. ಮೂರನೆಯದು, ಮರಳೇ ತುಂಬಿರುವ ದೇಶದಲ್ಲಿ ಮರಳು ಪುಕ್ಕಟೆಯೇ ಅಥವಾ ಅದಕ್ಕೂ ಹಣ ಕೊಡಬೇಕೆ ಎನ್ನುವುದು. ದುರಂತ ಎಂದರೆ, ಈ ದೇಶಗಳಲ್ಲಿ ತುಂಬಿ ಚೆಲ್ಲುವಷ್ಟು ಮರಳಿದ್ದರೂ ಅದು ಯಾವುದೇ ನಿರ್ಮಾಣ ಕಾರ್ಯಕ್ಕೆ ಬಳಸಲು ಯೋಗ್ಯವಾದುದಲ್ಲ. ಮರುಭೂಮಿಯ ಮರಳಿನ ಕಣಗಳು ಹೆಚ್ಚಾಗಿ ವೃತ್ತಾಕಾರದಲ್ಲಿರುತ್ತವೆ. ಗಾತ್ರದಲ್ಲಿ ತೀರಾ ಚಿಕ್ಕದಾಗಿರುತ್ತದೆ. ಜತೆಗೆ, ಸದಾ ಬೀಸುವ ಗಾಳಿಯಿಂದಾಗಿ ಕಣಗಳು ಸವೆದು, ಮೇಲ್ಮೈ ನುಣುಪಾಗಿರುತ್ತದೆ, ಸ್ವಲ್ಪ ಪ್ರಮಾಣದಲ್ಲಿ ಉಪ್ಪು ಮಿಶ್ರಿತವಾಗಿರುತ್ತದೆ. ಕಟ್ಟಡ ಅಥವಾ ರಸ್ತೆ ನಿರ್ಮಾಣ ಕಾರ್ಯದಲ್ಲಿ ಉಪಯೋಗಿಸುವ ಮರಳು ಕೋನಾಕಾರದಲ್ಲಿದ್ದು, ಒರಟಾಗಿರಬೇಕು.

ಗಾತ್ರದಲ್ಲಿ ಕಾಲು ಮಿಲಿಮೀಟರ್‌ನಿಂದ ಒಂದೂವರೆ ಮಿಲಿಮೀಟರ್‌ನಷ್ಟಿರಬೇಕು. ಅದಕ್ಕಿಂತ ಸಣ್ಣದಾದರೆ ಅದು ಹೂಳು ಅಥವಾ ಧೂಳಿನ ಕಣವೆಂದೂ, ದೊಡ್ಡದಾದರೆ ಜೆಲ್ಲಿ ಕಲ್ಲು ಎಂದೂ ಪರಿಗಣಿಸಲ್ಪಡುತ್ತದೆ. ಮರಳು ಉಪ್ಪಿನ ಅಂಶವಿಲ್ಲದೆ (ಉಪ್ಪಿನ ಅಂಶ ಕಾಂಕ್ರೀಟಿನಲ್ಲಿರುವ ಕಬ್ಬಿಣ ತುಕ್ಕು ಹಿಡಿಯುವಂತೆ ಮಾಡುತ್ತದೆ) ಶುದ್ಧವಾಗಿರಬೇಕು. ಆಗ ಎಲ್ಲ ಕಣಗಳೂ ಒಂದಕ್ಕೊಂದು ಬಂಧಿಸಿ, ಕಾಂಕ್ರೀಟಿಗೆ ಬಲ ಬರುತ್ತದೆ.

ಸದ್ಯ, ಮರುಭೂಮಿಯ ಮರಳನ್ನು ಶೋಧಿಸಿ, ತೊಳೆದು, ಸೋಸಿ ಉಪಯೋಗಿಸಲು ಯೋಗ್ಯವಾಗಿಸುವ ಬದಲು ಆಮದು ಮಾಡಿಕೊಳ್ಳುವುದು ಸುಲಭವೂ ಹೌದು, ಸೋವಿಯೂ ಹೌದು. ಅದಕ್ಕಾಗಿ ನದಿ ಅಥವಾ ಸಮುದ್ರದ ಮರಳಿಗೆ ಎಲ್ಲರೂ ಮೊರೆ ಹೋಗುತ್ತಿದಾರೆ. ಸಮುದ್ರದ ಮರಳಿಗಿಂತ ನದಿಯ ಮರಳು ಉತ್ತಮ ಏಕೆಂದರೆ ಅದರಲ್ಲಿ ಉಪ್ಪಿನ ಅಂಶ ಇರುವುದಿಲ್ಲ. ಸಮುದ್ರದ ಮರಳಿನಲ್ಲಿ ಚಿಪ್ಪು, ಜಲಚರಗಳ ತ್ಯಾಜ್ಯದ ಜತೆಗೆ ಇತರ ತ್ಯಾಜ್ಯಗಳೂ ಸೇರಿರುವುದರಿಂದ ಕೆಮಿಕಲ್ ರಿಯಾಕ್ಷನ್ ಆಗುವ ಸಾಧ್ಯತೆ ಇದ್ದದ್ದೇ. ಅದನ್ನು ಶುದ್ಧೀಕರಿಸದೇ ಉಪಯೋಗಿಸುವಂತಿಲ್ಲ.

ಎಲ್ಲ ಕಾರಣಗಳಿಂದಲೂ ನದಿಯ ಬುಡದ ಮರಳಿನಷ್ಟು ಯೋಗ್ಯ ಇನ್ಯಾವುದೂ ಅಲ್ಲ. ಆ ಕಾರಣಕ್ಕಾಗಿಯೇ ನದಿಯಿಂದ ಮರಳು ಎತ್ತುವುದಕ್ಕೆ ಎಲ್ಲಿಲ್ಲದ ಪೈಪೋಟಿ, ಮಾಫಿಯಾ, ಹೊಡೆದಾಟ, ಬಡಿದಾಟ ಕೊನೆಗೆ ಕೊಲೆಯವರೆಗೂ ಹೋಗುವುದಿದೆ. ನದಿಯಿಂದಲೇ ಆಗಲಿ ಅಥವಾ ಸಮುದ್ರದಿಂದಲೇ ಆಗಲಿ, ಮರಳು ಎತ್ತುವುದರಿಂದ ಪರಿಸರಕ್ಕೆ ಸಾಕಷ್ಟು ನಷ್ಟವಾಗುತ್ತದೆ. ಹೂಳೆತ್ತುವ ಕ್ರಿಯೆ ಅಥವಾ ಡ್ರೆಜಿಂಗ್ ಮಾಡುವಾಗ ನೀರು ಮಲಿನವಾಗುತ್ತದೆ.

ಸ್ಥಳೀಯ ಮೀನುಗಾರಿಕೆಯ ಮೇಲೆ ಪರಿಣಾಮ ಬೀರುತ್ತದೆ. ಹತ್ತಿರದ ಕೃಷಿಗೆ ತೊಡಕಾಗುತ್ತದೆ. ಜಲಾನಯನ ಪ್ರದೇಶದಲ್ಲಿರುವ ನೈಸರ್ಗಿಕ ಆವಾಸಸ್ಥಾನ ನಾಶವಾಗುತ್ತದೆ. ಇದರ ಜತೆಗೆ, ಸರಿಯಾದ ಮಾದರಿಯಲ್ಲಿ ಡ್ರೆಜಿಂಗ್ ಮಾಡದಿದ್ದರೆ ಸ್ಥಳದಲ್ಲಿರುವವರು ಕಿವುಡರಾಗುವುದರಿಂದ ಹಿಡಿದು ಸಾಯುವ ಸಾಧ್ಯತೆಯೂ ಇದೆ. ಭಾರತ ಒಂದರ ಪ್ರತಿ ವರ್ಷ ಸುಮಾರು ನೂರು ಜನ ಇದರಲ್ಲಿ ಸಾಯುತ್ತಾರೆ ಎಂದು ಅಂದಾಜಿಸಲಾಗಿದೆ.

ಎಲ್ಲಕ್ಕಿಂತ ಮಿಗಿಲಾಗಿ, ನೀರಿನ ತಳದಲ್ಲಿ ಕೊರೆದಷ್ಟೂ ನೀರಿನ ತಟ ಕುಸಿಯುತ್ತದೆ. ಬಾಲ್ಯದಲ್ಲಿ ನಾವು ಮಾಡಿದ ಪ್ರಯೋಗ(!) ವೇ ಇದಕ್ಕೆ ಸಾಕ್ಷಿ. ಸಮುದ್ರ ತಟದ ಮರಳಿನಲ್ಲಿ ಒಂದು ಅಡಿ ಹೊಂಡ ತೋಡಿದರೂ ಎರಡೋ ಮೂರೋ ಅಲೆ ಬಂದು, ಅಕ್ಕ ಪಕ್ಕದ ಮರಳನ್ನು ಕೊರೆದು ಆ ಹೊಂಡ ತುಂಬಿಸುವುದನ್ನು ನಾವು ನೋಡಿದ್ದೇವೆ. ಆ ನಿಯಮ ಇಂದಿಗೂ ಬದಲಾಗಲಿಲ್ಲ. ಹಾಗಾದರೆ ಮರಳನ್ನು ಎಲ್ಲಿಂದ ಪಡೆಯಬೇಕು? ನದಿಯ ಬುಡದಿಂದಲೇ ಪಡೆಯಬೇಕು.



ಏಕೆಂದರೆ, ನೂರಾರು ಕಿಲೋಮೀಟರ್ ದೂರದಲ್ಲಿರುವ ಗುಡ್ಡ ಅಥವಾ ಕಲ್ಲು, ಗಾಳಿ-ಮಳೆ, ಬಿಸಿಲಿನ ವಾತಾವರಣಕ್ಕೆ ಸಿಲುಕಿ ಸಣ್ಣ ಸಣ್ಣ ಚೂರಾಗಿ, ಮಳೆಯ ನೀರಿನೊಂದಿಗೆ ಬೆರೆತು ನದಿಯ ಬುಡಕ್ಕೇ ಬರುತ್ತದೆ. ಮುಂದೊಂದು ದಿನ ಸಮುದ್ರವನ್ನು ಸೇರುತ್ತದೆ. ಆದರೆ ಎಷ್ಟು ಎಂಬುದು ದೊಡ್ಡ ಪ್ರಶ್ನೆ. ಸಮಸ್ಯೆ ಆದದ್ದೇ ಅಲ್ಲಿ. ಈಗ ನಾವು ಇರುವುದಕ್ಕಿಂತ ಅಥವಾ ಬರುವುದಕ್ಕಿಂತ ಹೆಚ್ಚು ಮರಳನ್ನು ತೆಗೆಯುತ್ತಿದ್ದೇವೆ.

ಒಬ್ಬ ಮನುಷ್ಯ ಪ್ರತಿನಿತ್ಯ ಅಬ್ಬಬ್ಬಾ ಎಂದರೆ ನಾಲ್ಕು ಕಿಲೋ ಆಹಾರ ಸೇವಿಸುತ್ತಾನಂತೆ, ಅದೂ ಕುಡಿಯುವ ನೀರನ್ನೂ ಸೇರಿ. ಅಂದರೆ ವರ್ಷಕ್ಕೆ ಒಂದೂವರೆ ಸಾವಿರ ಕಿಲೋ ಅಥವಾ ಒಂದೂವರೆ ಟನ್. ಇಂದು ವಿಶ್ವದಾದ್ಯಂತ ಮಕ್ಕಳೂ ಸೇರಿದಂತೆ ಎಂಟುನೂರು ಕೋಟಿ ಜನರಿದ್ದಾರೆ. ಲೆಕ್ಕದಲ್ಲಿ ಕಂಜೂಸಿತನ ಬೇಡ, ಎಂಟು ಶತಕೋಟಿ ಜನರೂ ವರ್ಷಕ್ಕೆ ಒಂದೂವರೆ ಟನ್ ಆಹಾರ ಸೇವಿಸಿದರೆ ಹನ್ನೆರಡು ಶತಕೋಟಿ ಟನ್ ಆಯಿತು. ಆದರೆ ಮನುಷ್ಯ ಪ್ರತಿ ವರ್ಷ ಬಳಸುತ್ತಿರುವ ಮರಳು ಎಷ್ಟು ಗೊತ್ತೆ? ಬಳಸುವ ಆಹಾರಕ್ಕಿಂತ ನಾಲ್ಕು ಪಟ್ಟು ಅಧಿಕ, ಸುಮಾರು ಐವತ್ತು ಶತಕೋಟಿ ಟನ್!

ಅದರಲ್ಲಿ ಮುಕ್ಕಾಲು ಭಾಗಕ್ಕಿಂತಲೂ ಹೆಚ್ಚು ಕಾಂಕ್ರೀಟಿಗೆ. ಉಳಿದದ್ದು ಗಾಜು ತಯಾರಿಸಲು, ಮನೆಗೆ ಬಳಿಯುವ ಬಣ್ಣ ತಯಾರಿಸಲು, ಆಸಾಲ್ಟ್ ಅಥವಾ ಟಾರ್ ರಸ್ತೆ ನಿರ್ಮಾಣಕ್ಕೆ, ಇತ್ಯಾದಿ ಬಳಕೆಯಾಗುತ್ತದೆ. ಸಿಮೆಂಟಿನಲ್ಲಿರುವ ಪ್ರಮುಖ ವಸ್ತು ಮರಳು. ನಾವು ಬಳಸುವ ಟೂತ್‌ಪೇಸ್ಟ್, ಸೌಂದರ್ಯ ವರ್ಧಕ ಸಾಮಗ್ರಿಗಳು, ಕುಡಿಯುವ ವೈನ್, ಕಂಪ್ಯೂಟರ್ ಚಿಪ್, ಮೊಬೈಲ್ ಸ್ಕ್ರೀನ್ ತಯಾರಿಸಲು ಮರಳನ್ನು ಬಳಸುತ್ತಾರೆ. ಎಲ್ಲಿಯವರೆಗೆ ಎಂದರೆ, ಮರಳು ಇಲ್ಲದಿದ್ದರೆ ಇಂದು ನಾವು ಧರಿಸುವ ಒಳ ಉಡುಪು ಕೂಡ ನಮ್ಮ ಸೊಂಟದ ಮೇಲೆ ನಿಲ್ಲುವುದಿಲ್ಲ!

ನಿಜ, ಒಳ ಉಡುಪಿನಲ್ಲಿ ಬಳಸುವ ಇಲ್ಯಾಸ್ಟಿಕ್ ತಯಾರಿಕೆಗೂ ಮರಳು ಬೇಕು. ಸುಲಭವಾಗಿ ಅರ್ಥವಾಗುವಂತೆ ಹೇಳುವುದಾದರೆ, ಹತ್ತು ಮೀಟರ್ ಅಗಲ, ಒಂದು ಮೀಟರ್ ಎತ್ತರದ ಮರಳಿನ ರಸ್ತೆ ನಿರ್ಮಿಸಿದರೆ, ನಮ್ಮ ಭೂಮಿಯ ಎಪ್ಪತ್ತು ಸುತ್ತು ಬರುತ್ತದಂತೆ! ಇದು ಒಂದು ವರ್ಷದ ಮರಳಿನ ಬಳಕೆಯ ಲೆಕ್ಕ! ಇಲ್ಲಿ ಇನ್ನೂ ಒಂದು ವಿಷಯ ಹೇಳಬೇಕು.

ವಿಶ್ವದಾದ್ಯಂತ ಬಳಕೆಯಾಗುವ ಮರಳಿನಲ್ಲಿ ಶೇಕಡಾ ಎಪ್ಪತ್ತು ಏಷ್ಯಾ ಖಂಡದಲ್ಲಿ ಬಳಕೆಯಾಗುತ್ತದೆ. ಸಿಮೆಂಟ್ ಉತ್ಪಾದನೆಯಲ್ಲಿ ಇಂದು ಚೀನಾ ಮೊದಲನೆಯ ಸ್ಥಾನದಲ್ಲಿದೆ.

ಕಳೆದ ವರ್ಷ ವಿಶ್ವದಾದ್ಯಂತ ಉತ್ಪಾದನೆಯಾದ ಸಿಮೆಂಟಿನಲ್ಲಿ, ಅರ್ಧಕ್ಕಿಂತ ಹೆಚ್ಚು ಚೀನಾ ಉತ್ಪಾದಿಸಿದೆ. ಭಾರತ ಎರಡನೆಯ ಸ್ಥಾನದಲ್ಲಿದೆ. ಕಳೆದ ಎರಡು ಮೂರು ವರ್ಷದಲ್ಲಿ ಚೀನಾ ದೇಶ ಒಂದೇ ಅಮೆರಿಕ ಒಂದು ಶತಮಾನದಲ್ಲಿ ಬಳಸಿದಷ್ಟು ಮರಳನ್ನು ಬಳಸಿದೆ. ಮತ್ತೆ, ದೊಡ್ಡ ದೇಶ, ದೊಡ್ಡ ಜನಸಂಖ್ಯೆಗೆ ಬೆಲೆ ಇಲ್ಲವೇ!? ಇರಲಿ, ಕಳೆದ ಎರಡು ದಶಕದಲ್ಲಿ ವಿಶ್ವದಾದ್ಯಂತ ಮರಳಿನ ಬಳಕೆ ಮೂರು ಪಟ್ಟು ಹೆಚ್ಚಿದೆ. ನಿಜಕ್ಕೂ ಚಿಂತಾಜನಕ ಸ್ಥಿತಿ ಎಂದರೆ ಇದು.

ಏಕೆಂದರೆ, ಇದು ಪ್ರಕೃತಿ ತಾನಾಗಿಯೇ ಒದಗಿಸುವ ಪ್ರಮಾಣಕ್ಕಿಂತಲೂ ಎರಡರಿಂದ ಮೂರು ಪಟ್ಟು ಹೆಚ್ಚು! ಹೀಗೇ ಮುಂದುವರಿದರೆ, ಮುಂದೊಂದು ದಿನ ಮರಳಿಗೆ ಹಾಹಾಕಾರ ಏಳುವುದು ಖಂಡಿತ! ಈಗ ಪರ್ಯಾಯ ಉಪಾಯಕ್ಕೆ ಸಂಶೋಧನೆಗಳು ನಡೆಯುತ್ತಿವೆ. ಕಲ್ಲನ್ನು ಪುಡಿ ಮಾಡುವುದು ಸುಲಭವಾದರೂ, ದುಬಾರಿ. ಜತೆಗೆ, ಅದನ್ನು ಬಳಸುವಾಗ ನೀರು ಹೆಚ್ಚು ಬೇಕಾಗುತ್ತದೆ. ಅದು ಸಾಮಾನ್ಯ ಮರಳಿಗಿಂತ ಹೆಚ್ಚು ತೂಕದ್ದಾಗಿರುತ್ತದೆ. ಇದರ ಪರಿಣಾಮವಾಗಿ ರವಾನೆಯ ಬೆಲೆಯಲ್ಲಿಯೂ ವ್ಯತ್ಯಾಸವಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಇದು ಪರಿಸರಕ್ಕೆ ಎಲ್ಲಿಲ್ಲದ ಹಾನಿ ಉಂಟುಮಾಡುತ್ತದೆ.

ಇನ್ನೊಂದು, ಕಲ್ಲಿದ್ದಲಿನ ಗಣಿಯಲ್ಲಿ ಉಳಿಯುವ ಸಣ್ಣ ಕಣಗಳನ್ನು ಮರಳಿನ ಬದಲು ಕಾಂಕ್ರೀಟ್ ನಲ್ಲಿ ಬಳಸುವುದು. ಮತ್ತೊಂದು, ಪ್ಲಾಸ್ಟಿಕ್ ತ್ಯಾಜ್ಯವನ್ನು ಮರಳಿನ ಜಾಗದಲ್ಲಿ ಉಪಯೋಗಿಸುವುದು. ಇವೆಲ್ಲ ಇನ್ನೂ ಪ್ರಯೋಗದ ಹಂತದಲ್ಲಿಯೇ ಇವೆ ಎನ್ನಬಹುದು. ಇದ್ಯಾವುದೂ ಬಳಕೆಯ ವೇಗಕ್ಕೆ ಸಮವಲ್ಲ. ಸದ್ಯ, ನಮ್ಮ ಮುಂದಿರುವ ಉಪಾಯಗಳು ಎರಡು. ಮೊದಲನೆಯದು, ಒಡೆದು ಹಾಕಿದ ಕಟ್ಟಡದ ವಸ್ತುಗಳ ಮರು ಬಳಕೆ. ಕಾಂಕ್ರೀಟನ್ನು ಪುನಃ ಪುಡಿಮಾಡಿ ಮರಳಿನಂತೆ ಬಳಸುವುದು. ಜರ್ಮನಿಯಲ್ಲಿ ಶೇಕಡಾ ಅರವತ್ತೈದರಷ್ಟು ಇಂತಹ ವಸ್ತುಗಳು ಮರುಬಳಕೆಯಾಗುತ್ತಿದೆ.

ಭಾರತವೂ ಸೇರಿದಂತೆ ಇತರ ದಕ್ಷಿಣ ಏಷ್ಯಾ ದೇಶಗಳಲ್ಲಿ ಈ ಮರುಬಳಕೆ ಶೇಕಡಾ ಹತ್ತಕ್ಕಿಂತಲೂ ಕಮ್ಮಿ ಇದೆ. ಇನ್ನು ಎರಡನೆಯದು, ಮರಳಿನ ಬಳಕೆಯನ್ನೇ ಕಮ್ಮಿ ಮಾಡುವುದು. ವಿಶ್ವದಾದ್ಯಂತ ಕಟ್ಟಿದ ಕಟ್ಟಡಗಳಲ್ಲಿ ಶೇಕಡಾ ಹತ್ತರಷ್ಟು ಖಾಲಿ ಇರುತ್ತವಂತೆ. ನಿಜವೂ ಇರಬಹುದು. ಒಂದಕ್ಕಿಂತ ಹೆಚ್ಚು ಮನೆ ಕಟ್ಟಿಕೊಂಡು, ಬಾಡಿಗೆಗೂ ಕೊಡದೆ ಖಾಲಿ ಇಟ್ಟಿರುವ ಮನೆಗಳು, ಆಫೀಸ್‌ಗಳು, ಹೊಟೇಲಿನಲ್ಲಿ ಖಾಲಿ ಇರುವ ರೂಮ್‌ಗಳು ಎಲ್ಲವನ್ನೂ ಸೇರಿಸಿದರೆ ಇದು ಸರಿ ಎನಿಸುತ್ತದೆ.

ಅದು ಕಡಿಮೆಯಾಗಬೇಕು. ಇನ್ನೊಂದು, ಅಗತ್ಯಕ್ಕಿಂತ ದೊಡ್ಡದಾದ ಮನೆ, ಗ್ಯಾರೇಜು ಇತ್ಯಾದಿಗಳನ್ನು ಕಟ್ಟುವುದು. ಇಂಥ ವಿಷಯಗಳ ಕಡೆ ಗಮನ ಕೊಡಬೇಕು. ಆಗ ಮಾತ್ರ ಮರಳನ್ನು ಉಳಿಸಲು ಸಾಧ್ಯ. ನಮ್ಮ ಮುಂದೆ ಸವಾಲಾಗಿರುವ ನೀರು, ಮರದ ಸಂರಕ್ಷಣೆಯ ಜತೆಗೆ ಮರಳಿನ ಸಂರಕ್ಷಣೆಯೂ ಅತ್ಯಗತ್ಯ. ಅದರ ಕುರಿತು ಈಗಲೇ ಜಾಗರೂಕರಾಗಬೇಕು.

**– ಕಿರಣ್ ಉಪಾಧ್ಯಾಯ,** ಬಹ್ರೈನ್

---

**ಕಣ್ಣುಗಳು ಅಷ್ಟು ತುಂಬಿ ಹರಿಯುವಾಗ, ಎದೆಯೊಳಗೆ ಸಣ್ಣದೊಂದು ಚಂಡಮಾರುತವೇ ಏಳುತ್ತಿರುವಾಗ, ನಮ್ಮ ಬಾಯಿಯಿಂದ ಹೊರಬರುವುದು ಕೇವಲ ಹುಷಾರಾಗಿ ಹೋಗು, ತಲುಪಿದ ಮೇಲೆ ಫೋನ್ ಮಾಡು ಎಂಬ ಎರಡು ಸಪ್ಪೆ ವಾಕ್ಯಗಳು ಮಾತ್ರ. ಮನುಷ್ಯನ ಒಳಗಿರುವ ಆಕಾಶದಷ್ಟು ದೊಡ್ಡದಾದ ಸಂವೇದನೆಯನ್ನು ಹೊರಹಾಕಲು ಭಾಷೆ ಎಂಬ ಈ ಕಿರಿದಾದ ಬಾಗಿಲು ಎಷ್ಟು ಸೋಲುತ್ತದೆ ಎನ್ನುವುದಕ್ಕೆ ನಮ್ಮ ದಿನನಿತ್ಯದ ಬದುಕಿಗಿಂತ ದೊಡ್ಡ ಸಾಕ್ಷಿ ಬೇರೇನೂ ಬೇಕಿಲ್ಲ.**

# ಪದಗಳೆಂಬ ದೋಣಿ ಸದಾ ಸಣ್ಣದು, ಅನುಭವಗಳೆಂಬ ಸಾಗರ ಅನಂತ



ಇದೇ ಅಂತರಂಗ ಸುದ್ದಿ

ನಮ್ಮ ಭಾವನೆ, ತುಮುಲ, ಸಂವೇದನೆಗಳನ್ನೆಲ್ಲವನ್ನೂ ಹೇಳಲು, ವ್ಯಕ್ತಪಡಿಸಲು ನಮ್ಮಲ್ಲಿ ಪದಗಳೇ ಇಲ್ಲವೆಂದು. ಆ ಲೇಖನವನ್ನು ನಾನು ಮತ್ತೊಮ್ಮೆ ಓದುವಾಗ ನನಗೆ ಇನ್ನಷ್ಟು ಸಂಗತಿಗಳು ಹಾದುಹೋದವು. ರೈಲ್ವೆ ಪ್ಲಾಟ್ ಫಾರ್ಮಿನ ತುದಿಯಲ್ಲಿ ನಿಂತು, ನಿಧಾನವಾಗಿ ಚಲಿಸುತ್ತಿರುವ ರೈಲಿನ ಕಿಟಕಿಯೊಳಗಿಂದ ಕೈಬೀಸುತ್ತಿರುವ ಗೆಳೆಯನಿಗೆ ಮರಳಿ ಕೈಬೀಸುವಾಗ ನಮ್ಮ ಗಂಟಲಿನಲ್ಲಿ ಒಂದು ಸಣ್ಣ ಉಂಡೆ ಕಟ್ಟಿ ನಿಲ್ಲುತ್ತದಲ್ಲ, ಆ ಕ್ಷಣದಲ್ಲಿ ಯಾವ ನಿಘಂಟು ನೆರವಿಗೆ ಬರುತ್ತದೆ ಹೇಳಿ? ಅಂಥ ಕ್ಷಣಗಳನ್ನು ಹೇಳಲು ಪದಗಳೇ ಇಲ್ಲ.

ಕಣ್ಣುಗಳು ಅಷ್ಟು ತುಂಬಿ ಹರಿಯುವಾಗ, ಎದೆಯೊಳಗೆ ಸಣ್ಣದೊಂದು ಚಂಡಮಾರುತವೇ ಏಳುತ್ತಿರುವಾಗ, ನಮ್ಮ ಬಾಯಿಯಿಂದ ಹೊರಬರುವುದು ಕೇವಲ ಹುಷಾರಾಗಿ ಹೋಗು, ತಲುಪಿದ ಮೇಲೆ ಫೋನ್ ಮಾಡು ಎಂಬ ಎರಡು ಸಪ್ಪೆ ವಾಕ್ಯಗಳು ಮಾತ್ರ. ಮನುಷ್ಯನ ಒಳಗಿರುವ ಆಕಾಶದಷ್ಟು ದೊಡ್ಡದಾದ ಸಂವೇದನೆಯನ್ನು ಹೊರಹಾಕಲು ಭಾಷೆ ಎಂಬ ಈ ಕಿರಿದಾದ ಬಾಗಿಲು ಎಷ್ಟು ಸೋಲುತ್ತದೆ ಎನ್ನುವುದಕ್ಕೆ ನಮ್ಮ ದಿನನಿತ್ಯದ ಬದುಕಿಗಿಂತ ದೊಡ್ಡ ಸಾಕ್ಷಿ ಬೇರೇನೂ ಬೇಕಿಲ್ಲ.

ಪದಗಳೆಂಬವು ನದಿಯ ಮೇಲಿನ ಸೇತುವೆಗಳಿದ್ದಂತೆ. ಅವು ನದಿಯನ್ನು ದಾಟಿಸಬಲ್ಲವೇ ಹೊರತು, ಆ ನೀರಿನ ತಣ್ಣನೆಯ ಆಳವನ್ನಾಗಲಿ, ಅದರ ಪ್ರವಾಹದ ತೀವ್ರತೆಯನ್ನಾಗಲಿ ಎಂದಿಗೂ ಮುಟ್ಟಲಾರವು. ಭಾಷೆಯ ಈ ಅಸಹಾಯಕತೆಯನ್ನು ಜಗತ್ತಿನ ಕವಿಗಳೆಲ್ಲ ತಲೆತಲಾಂತರಗಳಿಂದ ಪ್ರೀತಿಯಿಂದಲೇ ಶಪಿಸುತ್ತಾ ಬಂದಿದ್ದಾರೆ.

ನಾವಾಡುವ ಪ್ರತಿಯೊಂದು ಪದವೂ ಒಂದು ಸಿದ್ಧ (ರೆಡಿಮೇಡ್ ಬಟ್ಟೆ) ಉಡುಪಿನಂತೆ. ಅಂಗಡಿಯಿಂದ ತಂದ ಶರ್ಟು ನಮಗೆ ಅಂದಾಜಿನಲ್ಲಿ ಸರಿಹೊಂದಬಹುದೇ ವಿನಃ, ನಮ್ಮ ಮೈಚರ್ಮದಷ್ಟೇ ನಿಕಟವಾಗಿ ಎಂದಿಗೂ ಬೆಸೆಯಲಾರದು. ನಮಗೆ ಅತಿಯಾದ ದುಃಖವಾದಾಗ ನಾವು ಕಿರುಚುವುದಿಲ್ಲ, ಬದಲು ಮುದುಡಿಕೊಳ್ಳುತ್ತೇವೆ. ಅತಿಯಾದ ಪ್ರೀತಿಯುಕ್ಕಿದಾಗ ಮಾತುಗಳು ಸೋತು ಕಣ್ಣುಗಳು ಮುಚ್ಚಿಕೊಳ್ಳುತ್ತವೆ.

ಜಗತ್ತಿನ ಅತ್ಯಂತ ತೀವ್ರವಾದ ಅನುಭವಗಳೆಲ್ಲವೂ ತಮ್ಮನ್ನು ಭಾಷಾಂತರಿಸಿಕೊಳ್ಳಲು ನಿರಾಕರಿಸಿ ಮೌನಕ್ಕೆ ಶರಣಾಗುತ್ತವೆ. ಪದಗಳಿಗೆ ಕೇವಲ ಸಂಗತಿಗಳನ್ನು ವರದಿ ಮಾಡುವ ಶಕ್ತಿಯಿದೆಯೇ ಹೊರತು, ಆ ಸಂಗತಿಯ ಹಿಂದಿರುವ ಜೀವಂತ ಮಿಡಿತವನ್ನು ಪೂರ್ತಿಯಾಗಿ ಹಿಡಿದಿಡುವ ತಾಕತ್ತಿಲ್ಲ. ಜರ್ಮನ್ ಭಾಷೆಯಲ್ಲಿ ವಾಲ್ಡ್‌ನ್ಸ್ಯಾಮ್‌ಕೈಟ್ ಎಂಬ ಒಂದು ಚೆಂದದ ಮಾತಿದೆ.

ಕಾಡಿನಲ್ಲಿ ಒಬ್ಬನೇ ನಿಂತಾಗ, ಸುತ್ತಲಿನ ಮರಗಳ ಉಸಿರಾಟದ ನಡುವೆ ತನ್ನ ಅಸ್ತಿತ್ವ ಎಷ್ಟು ನಗಣ್ಯ ಮತ್ತು ಅದೇ ಹೊತ್ತಿಗೆ ಎಷ್ಟು ಪಾವನವಾದದ್ದು ಎಂದು ಅನಿಸುವ ಆ ಏಕಾಂತಕ್ಕೆ ಅವರು ಈ ಹೆಸರಿಟ್ಟಿದ್ದಾರೆ.

ನಮ್ಮ ಮಲೆನಾಡಿನ ಅಥವಾ ಕರಾವಳಿಯ ಕಾಡಿನ ನಡುವೆ ನಡೆದುಹೋದ ಯಾರಿಗಾದರೂ ಈ ಅನುಭವ ನಿತ್ಯಸತ್ಯ. ಆದರೆ ನಮ್ಮಲ್ಲಿ ಅದಕ್ಕೆ ಪ್ರತ್ಯೇಕ ಪದವಿಲ್ಲ, ಹಾಗಂತ ಆ ಅನುಭವವೇ ನಮಗೆ ಅಪರಿಚಿತವೇ? ಖಂಡಿತ ಇಲ್ಲ. ಜಾರ್ಜಿಯನ್ ಭಾಷೆಯಲ್ಲಿ ಶೆಮೊಮೆಚಾಮಾ ಅಂತ ಇನ್ನೊಂದು ಶಬ್ದವಿದೆ. ಹೊಟ್ಟೆ ಪೂರ್ತಿ ತುಂಬಿ ತುಳುಕುತ್ತಿದ್ದರೂ ಊಟ ಎಷ್ಟು ರುಚಿಯಾಗಿದೆ ಎಂದರೆ ತಟ್ಟೆ ಖಾಲಿ ಮಾಡುವವರೆಗೂ ತಿನ್ನುವುದನ್ನು ನಿಲ್ಲಿಸಲಾಗದ ಸ್ಥಿತಿ ಅದು.

ನಮ್ಮ ಅಜ್ಜಿಯಂದಿರು ಬಡಿಸಿದ ತುಪ್ಪದನ್ನದ ಮುಂದೆ ಕುಳಿತಾಗ ನಾವೆಲ್ಲರೂ ಇದನ್ನೇ ಮಾಡಿದ್ದಲ್ಲವೇ? ಒಂದು ಭಾಷೆಗೆ ಪದ ಸಿಕ್ಕಿದೆ, ಇನ್ನೊಂದು ಭಾಷೆಗೆ ಅನುಭವ ಮಾತ್ರ ದಕ್ಕಿದೆ, ಅಷ್ಟೇ ವ್ಯತ್ಯಾಸ. ಯೋಚಿಸಿ ನೋಡಿ, ರಾತ್ರಿ ಎರಡೂವರೆ ಗಂಟೆಗೆ ಹಳೆ ಮನೆಯ ಹಂಚಿನ ಮೇಲೆ ಮಳೆ ಹನಿಗಳು ಬಿದ್ದಾಗ ಬರುವ ಆ ಒಂದು ಲಯವಿದೆಯಲ್ಲ, ನಿದ್ದೆ ಬಾರದೇ ಎದ್ದು ಕುಳಿತಾಗ ಆ ಶಬ್ದ ನಮ್ಮ ತಲೆಯೊಳಗೆ ಯಾವ್ಯಾವ ಹಳೆಯ ಬೀದಿಗಳನ್ನೆಲ್ಲ ಸುತ್ತಿಸಿ ಕರೆತರುತ್ತದೆ? ಅದಕ್ಕೆ ಜಗತ್ತಿನ ಯಾವ ಭಾಷೆಯದರೂ ಒಂದು ಚೊಕ್ಕಟವಾದ ಹೆಸರಿದೆಯೇ? ಮಳೆಯಿದೆ, ಸದ್ದಿದೆ, ನೆನಪಿದೆ. ಆದರೆ ಆ ಮೂರೂ ಬೆರೆತು ಎದೆಯೊಳಗೆ ಸೃಷ್ಟಿಸುವ ಆ ವಿಚಿತ್ರ ವಿಷಾದಕ್ಕೆ ಯಾವ ಹೆಸರನ್ನೂ ಇಡಲು ಸಾಧ್ಯವಾಗಿಲ್ಲ.

ಭಾಷೆಯೆಂಬುದು ಸೂರ್ಯನ ಬಿಸಿಲಿಗೆ ಒಡ್ಡಿದ ಅಂಗೈಯಂತೆ. ನೆರಳು ಬೀಳುತ್ತದೆ ನಿಜ, ಆದರೆ ಅದು ಆಶ್ರಯ ಅಥವಾ ತಂಪು ನೀಡಲು ಹೇಗೆ ಸಾಧ್ಯ? ಪದಗಳ ಮಿತಿ ಎದುರಾಗುವುದೇ ನಮ್ಮ ಮುಖಾಮುಖಿ ಭೇಟಿಗಳಲ್ಲಿ. ದಶಕಗಳ ಕಾಲ ಪ್ರೀತಿಸಿ ದೂರವಾದ ಇಬ್ಬರು ವ್ಯಕ್ತಿಗಳು, ಯಾವುದೋ ಅಪರಿಚಿತ ನಗರದ ಸಿಗ್ನಲ್ ದಾಟುವಾಗ ಹಠಾತ್ತನೆ ಎದುರುಬದುರಾದರೆ ಏನಾಗುತ್ತದೆ? ಆ ಮೂರು ಸೆಕೆಂಡುಗಳ ಕಾಲ ಪರಸ್ಪರ ನಿಲ್ಲುವ ಕಣ್ಣುಗಳಲ್ಲಿ ನೂರಾರು ಸಂಜೆಗಳು, ಹಂಚಿಕೊಂಡ ಚಹಾಗಳು, ಹರಿದುಹೋದ ಪತ್ರಗಳು, ಅಸಹಾಯಕ ಮುನಿಸುಗಳು ಎಲ್ಲವೂ ಒಟ್ಟಿಗೇ ಮಿಂಚಿ ಮಾಯವಾಗುತ್ತವೆ.

ಅಲ್ಲಿ ಯಾವ ಪದವನ್ನು ತಂದು ನಿಲ್ಲಿಸಿದರೂ ಅದು ಹಾಸ್ಯಾಸ್ಪದವಾಗಿಬಿಡುತ್ತದೆ. ಹೇಗಿದ್ದೀರಾ? ಎನ್ನುವ ಮಾತು ಬರೀ ಮುಖವಾಡದಂತೆ ತೇಲಿಹೋಗುತ್ತದೆ. ಆ ಇಡೀ ಸಂಕೀರ್ಣ ಸಂಬಂಧಕ್ಕೆ, ಆ ಕ್ಷಣದ ತಳಮಳಕ್ಕೆ ಹೆಸರಿಡಲು ನಿಘಂಟುಗಳು ಬೆವತು ಹೋಗುತ್ತವೆ. ಅಲ್ಲಿ ಉಳಿಯುವುದು ಕೇವಲ ಒಂದು ಸಣ್ಣ ನಡುಕ, ಗಂಟಲಿನ ಬಿಗಿ ಮತ್ತು ಮುನ್ನಡೆಯುವ ಹೆಜ್ಜೆಗಳು.

ಭಾಷೆಯು ಸಂಸ್ಕೃತಿಯ ನೆರಳಿನಲ್ಲಿ ಬೆಳೆಯುವುದರಿಂದ, ಪ್ರತಿಯೊಂದು ಸಮಾಜವೂ ತನಗೆ ತೋಚಿದಂತೆ ಪದಗಳನ್ನು ರೂಪಿಸಿಕೊಳ್ಳುತ್ತದೆ. ಫಿಲಿಪಿನೋ ಭಾಷೆಯಲ್ಲಿ ಗಿಗಿಲ್ ಎಂಬ ಮುದ್ದಾದ ಶಬ್ದವಿದೆ. ಯಾವುದಾದರೂ ಒಂದು ಮಗು ಅಥವಾ ನಾಯಿಮರಿ ಅತಿಯಾಗಿ ಮುದ್ದಾಗಿದ್ದಾಗ, ಅದನ್ನು ತಡೆಯಲಾರದೆ ಬಿಗಿಯಾಗಿ ಅಪ್ಪಿಕೊಳ್ಳಬೇಕು ಅಥವಾ ಕೆನ್ನೆಯನ್ನು ಚಿವುಟಿ ಮುದ್ದಾಡಬೇಕು ಅನಿಸುವ ಆ ಅತಿಯಾದ ಪ್ರೀತಿಯ ತುರಿಕೆಗೆ ಅವರು ಹಾಗೆನ್ನುತ್ತಾರೆ. ನಾವೆಲ್ಲರೂ ದಿನವೂ ಇದನ್ನು ಮಾಡಿರುತ್ತೇವೆ. ಆದರೆ ಇಂಗ್ಲಿಷಿಗಾಗಲಿ, ನಮಗಾಗಲಿ ಅದನ್ನು ಕರಾರುವಾಕ್ಕಾಗಿ ಹಿಡಿಯುವ ಏಕಪದ ಹೊಳೆದಿಲ್ಲ.

ಹಾಗೆಯೇ ಸ್ಪ್ಯಾನಿಷ್‌ನ ಸೊಬ್ರೆಮೆಸಾ-ಊಟ ಮುಗಿದ ಮೇಲೂ ಎದ್ದುಹೋಗಲು ಮನಸ್ಸಿಲ್ಲದೇ, ಮೇಜಿನ ಸುತ್ತಲೇ ಕುಳಿತು ಹರಟೆ ಹೊಡೆಯುತ್ತಾ ಕಳೆಯುವ ಆ ಸುದೀರ್ಘ ಸಂಜೆಯ ಹರಟೆಯ ಸುಖ. ನಮ್ಮೂರಿನ ಮದುವೆ ಮನೆಗಳಲ್ಲಿ, ಬಾಳೆಲೆಯ ಮುಂದೆ ಕುಳಿತು ಬೀಗರ ಜತೆ ಮಾಡುವ ಹರಟೆ ಇದೇ ಅಲ್ಲವೇ? ಪದಗಳ ಮಿತಿಯೇ ಕಲೆಯ ಜನನಕ್ಕೆ ಕಾರಣವಾಗುತ್ತದೆ ಎನ್ನುವುದು ದೊಡ್ಡ ವಿಸ್ಮಯ.

ಎಲ್ಲವೂ ಪದಗಳಲ್ಲಿಯೇ ಸುಲಭವಾಗಿ ಸಿಕ್ಕಿಬಿಡುತ್ತಿದ್ದರೆ ಮನುಷ್ಯ ಚಿತ್ರ ಬಿಡಿಸುತ್ತಿರಲಿಲ್ಲ, ಪಿಟೀಲಿನ ತಂತಿಯ ಮೇಲೆ ಬೆರಳಿಡುತ್ತಿರಲಿಲ್ಲ, ಕಲ್ಲಿನಲ್ಲಿ ಶಿಲ್ಪವನ್ನು ಕಡೆಯುತ್ತಿರಲಿಲ್ಲ. ಶಬ್ದಗಳು ಎಲ್ಲಿ ಮುಗ್ಗರಿಸಿ ಬೀಳುತ್ತವೆಯೋ, ಅಲ್ಲಿಂದಲೇ ಸಂಗೀತದ ದಾರಿ ಶುರುವಾಗುತ್ತದೆ. ಬಿಸ್ಮಿ ಖಾನರ ಶಹನಾಯಿಯ ಆ ಒಂದು ತೀವ್ರವಾದ ಎಳೆತ ನಮಗೆ ಕೊಡುವ ನೋವನ್ನು ಯಾವ ಸಾಹಿತ್ಯವೂ ಅಷ್ಟು ನಿಖರವಾಗಿ ವಿವರಿಸಲಾರದು.

ಭಾಷೆಯು ನೆಲದ ಮೇಲಿನ ರಸ್ತೆಯಾದರೆ, ಕಲೆ ಮತ್ತು ಸಂಗೀತಗಳು ಮುಕ್ತವಾಗಿ ಹಾರಾಡುವ ಹಕ್ಕಿಯಂತೆ. ಅವುಗಳಿಗೆ ಗಡಿಗಳಿಲ್ಲ, ಶಬ್ದಕೋಶಗಳ ಶಿಸ್ತಿನ ಕಟ್ಟುಪಾಡುಗಳಿಲ್ಲ. ಮನುಷ್ಯನ ಮಿದುಳು ತಂತ್ರಜ್ಞಾನವನ್ನು ಎಷ್ಟೇ ಮುಂದುವರಿಸಿದರೂ, ಭಾವನೆಗಳ ಈ ಅನಿರ್ವಚನೀಯ ವಲಯ ಮಾತ್ರ ಸದಾ ಅಸ್ಪೃಶ್ಯವಾಗಿಯೇ ಉಳಿದುಬಿಡುತ್ತದೆ.

ನಾವು ಇಂದು ಕೃತಕ ಬುದ್ಧಿಮತ್ತೆಯ ಕಾಲದಲ್ಲಿದ್ದೇವೆ, ಲಕ್ಷಾಂತರ ಪದಗಳನ್ನು ಸೆಕೆಂಡುಗಳಲ್ಲಿ ಪೋಣಿಸಬಲ್ಲ ತಂತ್ರಜ್ಞಾನ ನಮ್ಮ ಮುಂದಿದೆ. ಆದರೆ, ಪ್ರೀತಿಪಾತ್ರರ ಹಳೆಯ ಅಂಗಿಯೊಂದನ್ನು ಮೂಸಿದಾಗ ಮೂಗಿಗೆ ಬಡಿಯುವ ಆ ಒಂದು ವಿಶಿಷ್ಟ ವಾಸನೆ ಮತ್ತು ಆ ವಾಸನೆ ತರುವ ಆಪ್ತ ಸಂಕಟವನ್ನು ಯಾವ ಕಂಪ್ಯೂಟರಿನ ಕೋಡಿಂಗ್ ತಾನೇ ಅರ್ಥಮಾಡಿಕೊಂಡೀತು? ಹಳೆ ಪುಸ್ತಕದ ಹಳದಿ ಪುಟಗಳನ್ನು ತಿರುವಾಗ ಕೈಬೆರಳಿಗೆ ಸಿಗುವ ಆ ಕಾಗದದ ಒರಟು ಸ್ಪರ್ಶದಲ್ಲಿರುವ ಕಾವ್ಯಕ್ಕೆ ಯಾವ ಅಲ್ಗಾರಿದಂ ಹೆಸರು ಕೊಟ್ಟೀತು? ಭಾಷೆಯಲ್ಲಿ ಎಲ್ಲದಕ್ಕೂ ಹೆಸರಿಲ್ಲದಿರುವುದೇ ಒಂದು ದೊಡ್ಡ ಸೌಭಾಗ್ಯ. ಎಲ್ಲ ಭಾವನೆಗಳಿಗೂ ಒಂದು ಚೊಕ್ಕಟವಾದ ಲೇಬಲ್ ಅಂಟಿಸಿ, ಬಾಟಲಿಯಲ್ಲಿ ಹಾಕಿ ಕಪಾಟಿನಲ್ಲಿಟ್ಟು ಬಿಟ್ಟರೆ, ಬದುಕು ಕೇವಲ ಒಂದು ರಸಾಯನಶಾಸ್ತ್ರದ ಲ್ಯಾಬೋರೇಟರಿಯಂತೆ ಯಾಂತ್ರಿಕವಾಗಿ ಬಿಡುತ್ತಿತ್ತು. ಈ ನಿಗೂಢತೆಯೇ, ಈ ಹೆಸರಿಲ್ಲದ ತಳಮಳವೇ ನಮ್ಮನ್ನು ಮತ್ತೆ ಮತ್ತೆ ಜೀವಂತವಾಗಿರಿಸುವುದು. ಒಂದು ಸಂಜೆ ಕಿಟಕಿಯ ಬಳಿ ನಿಂತು ಬಾನಿನ ಬಣ್ಣ ಬದಲಾಗುವುದನ್ನು ದಿಟ್ಟಿಸುವಾಗ, ಒಳಗೆ ಮೂಡುವ ಆ ಅನಾಮಧೇಯ ಭಾವಕ್ಕೆ ಹೆಸರಿಲ್ಲದಿರಲಿ. ಅದು ಹಾಗೇ ಹರಿದುಹೋಗಲಿ.

ಕೊನೆಗೂ ಮನುಷ್ಯ ಸಂಬಂಧಗಳನ್ನು ಉಳಿದುಕೊಂಡಿರುವುದು ಆಡಿದ ಮಾತುಗಳ ಮೇಲಲ್ಲ, ಆಡಲಾಗದ ಮಾತುಗಳ ಹಿಂದಿರುವ ಮೌನವನ್ನು ಪರಸ್ಪರ ಅರ್ಥಮಾಡಿಕೊಳ್ಳುವುದರ ಮೇಲೆ. ಆಸ್ಪತ್ರೆಯ ಬೆಡ್ ಮೇಲೆ ಮಲಗಿದ ತಾಯಿಯ ಕೈಯನ್ನು ಮೌನವಾಗಿ ಹಿಡಿದುಕೊಂಡ ಮಗನ ಬೆರಳುಗಳ ಸ್ಪರ್ಶದಲ್ಲಿರುವ ಸಾಂತ್ವನ, ಯಾವ ಗೆಟ್ ವೆಲ್ ಸೂನ್ ಕಾರ್ಡಿನಲ್ಲೂ ಸಿಗಲು ಸಾಧ್ಯವಿಲ್ಲ. ಪದಗಳೆಂಬ ದೋಣಿಗಳು ಸದಾ ಸಣ್ಣವು, ಆದರೆ ನಮ್ಮ ಅನುಭವಗಳೆಂಬ ಸಾಗರ ಅನಂತ. ಆ ಸಾಗರದ ದಡದಲ್ಲಿ ನಿಂತು, ಅಲೆಗಳ ಸದ್ದಿಗೆ ಕಿವಿಗೊಟ್ಟು, ಶಬ್ದಗಳ ಹಂಗಿಲ್ಲದೇ ಬದುಕುವುದನ್ನು ಕಲಿಯುವುದೇ ನಿಜವಾದ ಜೀವನ ಪ್ರೀತಿ.

ಭಾಷೆ ಸೋತ ಜಾಗದ ನಿಜವಾದ ಮನುಷ್ಯ ಅರಳುತ್ತಾನೆ. ಕಮ್ಮಿ ಪದಗಳಿರುವ ಲಾಭ ಲಕ್ಷಾಂತರ ಪದಗಳನ್ನು ಜೇಬಿನಲ್ಲಿಟ್ಟುಕೊಂಡು, ದಪ್ಪ ದಪ್ಪ ನಿಘಂಟುಗಳನ್ನು ಕಂಕುಳಲ್ಲಿ ಹೊತ್ತು ತಿರುಗುವ ನಮಗೆ ಅತಿ ಕಡಿಮೆ ಶಬ್ದಗಳಿರುವ ಜಗತ್ತೊಂದನ್ನು ಕಲ್ಪಿಸಿಕೊಳ್ಳುವುದೇ ಒಂದು ಬೆರಗು. ಅಮೆಜಾನ್‌ನ ನಿಗೂಢ ಕಾಡುಗಳ ಮಡಿಲಿನಲ್ಲಿ, ಮೈಸಿ ನದಿಯ ತಟದಲ್ಲಿ ವಾಸಿಸುವ ಪಿರಾಹಾ ಎಂಬ ಪುಟ್ಟ ಆದಿವಾಸಿ ಬುಡಕಟ್ಟಿನ ಜನರ ಭಾಷೆಯನ್ನು ನೋಡಿದಾಗ ನಾಗರಿಕ ಮನುಷ್ಯನ ಇಡೀ ಭಾಷಾ ಜಂಬವೆಲ್ಲ ಕಳಚಿಬೀಳುತ್ತದೆ. ಅವರ ಇಡೀ ಭಾಷೆಯಲ್ಲಿ ಇರುವುದೇ ಕೇವಲ ಬೆರಳೆಣಿಕೆಯಷ್ಟು ಶಬ್ದಗಳು. ಕೆಲವೇ ಕೆಲವು ಸ್ವರಗಳು ಮತ್ತು ವ್ಯಂಜನಗಳು. ಆದರೆ ಆ ಪುಟ್ಟ





ಬೊಗಸೆಯ ಅವರು ತಮ್ಮ ಇಡೀ ಬದುಕನ್ನು ಅದೆಷ್ಟು ಧ್ಯಾನಸ್ಥವಾಗಿ, ಆನಂದವಾಗಿ ಬಾಳುತ್ತಾರೆಂದರೆ, ನಾವಿಲ್ಲಿ ಪದಗಳ ಭಾರಕ್ಕೆ ನಲುಗಿ ಕಳೆದುಕೊಂಡದ್ದೇನು ಎಂಬ ಕಟು ಸತ್ಯ ವೇದ್ಯವಾಗುತ್ತದೆ.

ಪಿರಾಹಾ ಭಾಷೆಯಲ್ಲಿ ನಾವು ನಾಗರಿಕರು ಅನಿವಾರ್ಯವೆಂದು ಕೊಂಡಿರುವ ಸಂಖ್ಯೆಗಳೇ ಇಲ್ಲ. ಒಂದು, ಎರಡು, ಹತ್ತು, ನೂರು ಎಂಬ ಲೆಕ್ಕಾಚಾರದ ಗೀಳೇ ಅವರಿಗಿಲ್ಲ. ಅವರ ಬಳಿ ಇರುವುದು ಕೇವಲ ಸ್ವಲ್ಪ ಮತ್ತು ಹೆಚ್ಚು ಎಂಬ ಎರಡು ಸರಳ ಕಲ್ಪನೆಗಳು ಮಾತ್ರ. ತೂಕದ ಮಾಪಕಗಳಿಲ್ಲದೆ, ಬ್ಯಾಂಕ್ ಬ್ಯಾಲೆನ್ಸ್‌ಗಳಿಲ್ಲದೆ, ಆಸ್ತಿಯ ಲೆಕ್ಕವಿಲ್ಲದೆ ಬದುಕುವ ಆ ಜನರಿಗೆ ಗಣಿತದ ಸೂತ್ರಗಳ ಹಂಗಾದರೂ ಏಕೆ ಬೇಕು? ನದಿಯಲ್ಲಿ ಹಿಡಿದ ಮೀನು ಇವತ್ತಿನ ಹಸಿವಿಗೆ ಸಾಕಾದರೆ ಮುಗಿಯಿತು, ನಾಳೆಗೆ ಎಷ್ಟು ಉಳಿಯಿತು ಎಂಬ ಚಿಂತೆಯಿಲ್ಲದ ಹಕ್ಕಿಯಂಥ ಬದುಕು ಅವರದು. ಸಂಖ್ಯೆಗಳಿಲ್ಲದ ಕಾರಣಕ್ಕಾಗಿಯೇ ಅಲ್ಲಿ ಯಾರೂ ಬಡವರೂ ಅಲ್ಲ, ಯಾರೂ ಶ್ರೀಮಂತರೂ ಅಲ್ಲ, ಬದುಕು ಹಂಚಿಕೊಳ್ಳುವ ಒಂದು ತುತ್ತು ಅಷ್ಟೇ. ಬಣ್ಣಗಳ ವಿಷಯಕ್ಕೆ ಬಂದರೆ ನಮ್ಮಲ್ಲಿ ನೇರಳೆ, ಕಿತ್ತಳೆ, ಕಡುಗೆಂಪು ಎಂದು ನೂರಾರು ಹೆಸರುಗಳಿವೆ. ಆದರೆ ಪಿರಾಹಾ ಜನರ ಬಳಿ ಬಣ್ಣಗಳಿಗೆ ಪ್ರತ್ಯೇಕ ನಾಮಪದಗಳೇ ಇಲ್ಲ. ಅವರು ಕಡುಕೆಂಪು ಬಣ್ಣವನ್ನು ರಕ್ತದ ಹಾಗೆ ಅನ್ನುತ್ತಾರೆ, ಹಸಿರನ್ನು ಎಲೆಯ ಹಾಗೆ ಅನ್ನುತ್ತಾರೆ, ಆಕಾಶದ ನೀಲಿಯನ್ನು ನೀರಿನ ಹಾಗೆ ಎಂದು ಕರೆಯುತ್ತಾರೆ.

ಬಣ್ಣಗಳನ್ನು ಪ್ರಕೃತಿಯಿಂದ ಬೇರ್ಪಡಿಸಿ ನೋಡುವ ತಾಂತ್ರಿಕತೆ ಅವರಿಗಿನ್ನೂ ಸೋಕಿಲ್ಲ, ನೇರವಾಗಿ ಮಣ್ಣಿನ, ಮರದ, ಹೂವಿನ ರೂಪಕಗಳ ಜಗತ್ತನ್ನು ನೋಡುವ ಆ ಕಣ್ಣುಗಳು ಎಷ್ಟು ಮುಗ್ಧವಾಗಿರಬೇಡ? ನಮಗೆ ಬಣ್ಣ ಕೇವಲ ಶಬ್ದ, ಅವರಿಗೆ ಬಣ್ಣವೆಂದರೆ ಜೀವಂತ ಪ್ರಕೃತಿ. ಅತ್ಯಂತ ವಿಸ್ಮಯಕಾರಿಯಾದ ಸಂಗತಿಯೆಂದರೆ, ಅವರ ಭಾಷೆಯಲ್ಲಿ ಗತಕಾಲ ಮತ್ತು ಭವಿಷ್ಯತ್ ಕಾಲಗಳ ಕಟ್ಟುಪಾಡುಗಳೇ ಇಲ್ಲ.

ನಿನ್ನೆ ನಡೆದುಹೋದದ್ದರ ಬಗ್ಗೆ ಹಲುಬುವ ಗೋಜಿಲ್ಲ, ನಾಳೆ ಏನಾಗುವುದೋ ಎಂಬ ಆತಂಕದ ಉಸಿರಾಟವಿಲ್ಲ. ಅವರು ಮಾತನಾಡುವುದೆಲ್ಲವೂ ಈಗ ಮತ್ತು ಇಲ್ಲಿ ಎಂಬ ವರ್ತಮಾನದ ಕ್ಷಣದ ಬಗ್ಗೆ ಮಾತ್ರ. ಕಣ್ಣಿಗೆ ಕಾಣುವ, ಅನುಭವಕ್ಕೆ ಸಿಗುವ ವಾಸ್ತವವನ್ನು ಮಾತ್ರ ನಂಬುವ ಒಂದು ವಿಚಿತ್ರ ನಿಯಮ ಅವರಲ್ಲಿದೆ. ನಾವಿಲ್ಲಿ ಹಳೆಯ ನೆನಪುಗಳ ಕಸ ಗುಡಿಸುತ್ತಾ, ಮುಂದಿನ ತಿಂಗಳ ಕಂತುಗಳ ಬಗ್ಗೆ ತಲೆಕೆಡಿಸಿಕೊಳ್ಳುತ್ತಾ ಇವತ್ತಿನ ಸಂಜೆಯ ಬಿಸಿಲನ್ನೇ ಮರೆತುಬಿಡುವಾಗ, ಅವರು ಪ್ರತಿಯೊಂದು ಕ್ಷಣವನ್ನೂ ಅದರ ಇಡಿಯಾದ ತೀವ್ರತೆಯಲ್ಲಿ ಹೀರುತ್ತಾ ಬದುಕಿರುತ್ತಾರೆ.

ಕೇವಲ ಹನ್ನೆರಡು-ಹದಿನಾಲ್ಕು ಧ್ವನಿಗಳಿಂದಲೇ ಅವರ ಮಾತುಕತೆ ಸಾಗುತ್ತದೆ. ವಿಶೇಷವೆಂದರೆ, ಅವರು ಕೇವಲ ತುಟಿಗಳಿಂದ ಮಾತನಾಡುವುದಿಲ್ಲ; ಸಿಳ್ಳೆ ಹಾಕುವ ಮೂಲಕ, ಗುನುಗುವ ಮೂಲಕ, ಹಾಡಿನ ಧಾಟಿಯ ತಮ್ಮ ಮಾತುಗಳನ್ನು ನದಿಯ ಆಚೀಚೆ ದಡಗಳಿಗೆ ದಾಟಿಸಿ ಬಿಡುತ್ತಾರೆ. ಕಾಡಿನಲ್ಲಿ ಬೇಟೆಗೆ ಹೋದಾಗ ಶಬ್ದ ಮಾಡದೆ, ಬರೀ ಸಿಳ್ಳಿನ ಏರಿಳಿತದ ಒಬ್ಬರಿಗೊಬ್ಬರು ಸಂಕೇತಗಳನ್ನು ಕೊಟ್ಟುಕೊಳ್ಳುವ ಆ ಕಲೆ ನಮಗೆ ಅದ್ಭುತ ಲೋಕದಂತೆ ಕಾಣುತ್ತದೆ. ಭಾಷೆಯೆಂಬುದು ಗಂಟಲ ಸದ್ದು ಮಾತ್ರವಲ್ಲ, ಅದು ಉಸಿರಿನ ಮತ್ತು ಮೌನದ ಲಯಬದ್ಧ ನೃತ್ಯ ಎಂಬುದನ್ನು ಅವರ ನುಡಿ ತೋರಿಸಿಕೊಡುತ್ತದೆ. ಅದೇ ರೀತಿ, ಆಸ್ಟ್ರೇಲಿಯಾದ ಹಳೆಯ ನೆಲದಲ್ಲಿ ಟಿಯೋವಿ ಎಂಬ ಇನ್ನೊಂದು ಭಾಷೆಯಿದೆ; ಅಲ್ಲಿ ಕೇವಲ ನೂರಾರು ಪದಗಳ ಇಡೀ ಸಂಸಾರ ಸಾಗಿಹೋಗುತ್ತದೆ. ಅಥವಾ ಆಧುನಿಕ ಜಗತ್ತಿನಲ್ಲಿ ಕೃತಕವಾಗಿ ಸೃಷ್ಟಿಸಲಾದ ಟೋಕಿ ಪೋನಾ ಎಂಬ ತೀರ ಪುಟ್ಟ ಭಾಷೆಯನ್ನು ನೋಡಿ.

ಕೇವಲ 120 ರಿಂದ 125 ಪದಗಳಷ್ಟೇ ಇರುವ ಆ ಪುಟ್ಟ ಭಾಷೆಯನ್ನು ರೂಪಿಸಿದ ತತ್ವವೇ ಸರಳತೆ. ಒಂದು ಮಗು ತನಗೆ ಹಸಿವಾದಾಗ ಕಣ್ಣೀರ ಎಲ್ಲವನ್ನೂ ಹೇಳಿಬಿಡುವಂತೆ, ಅತಿ ಕಡಿಮೆ ಪದಗಳಲ್ಲಿ ಜಗತ್ತಿನ ಎಲ್ಲ ಜಂಜಾಟಗಳನ್ನು ಕರಗಿಸಿ, ಬದುಕನ್ನು ತಿಳಿಗೊಳಿಸುವ ಒಂದು ಸುಂದರ ಪ್ರಯತ್ನ ಅದು. ನಮ್ಮ ನಾಗರಿಕ ಸಮಾಜದಲ್ಲಿ ಶಬ್ದಗಳು ಹೆಚ್ಚಾದಷ್ಟೂ ಮನುಷ್ಯರ ನಡುವಿನ ಅಂತರವೂ ಹೆಚ್ಚಾಗುತ್ತಲೇ ಹೋಗಿದೆ. ರಾಜಕೀಯದ ಭಾಷಣಗಳು, ಕೋರ್ಟಿನ ಕಾಗದಗಳು, ಜಾಹೀರಾತುಗಳ ಅಬ್ಬರ, ಸಾಮಾಜಿಕ ಜಾಲತಾಣಗಳ ಟ್ರೋಲ್‌ಗಳು-ಇವೆಲ್ಲವೂ ನಮ್ಮ ನಾಲಿಗೆಯ ಮೇಲಿರುವ ಲಕ್ಷಾಂತರ ಪದಗಳ ದುರುಪಯೋಗವಲ್ಲದೆ ಮತ್ತೇನು? ಸುಳ್ಳು ಹೇಳಲು, ವಂಚಿಸಲು, ಮೋಸದ ಪರದೆ ಎಳೆಯಲು ನಮಗೆ ಹೆಚ್ಚು ಹೆಚ್ಚು ಪದಗಳು ಬೇಕು.

ಆದರೆ ಪಿರಾಹಾ ಜನರ ಬಳಿ ಆಡಂಬರದ ಶಬ್ದಗಳೇ ಇಲ್ಲದ ಕಾರಣ, ಅವರಲ್ಲಿ ಸುಳ್ಳು ಹೇಳುವ ಅವಕಾಶಗಳೂ ತೀರ ಕಡಿಮೆ. ಅವರ ಮಾತು ನದಿಯ ತಿಳಿನೀರಿನಂತೆ ತಳ ಕಾಣಿಸುವಷ್ಟು ಪಾರದರ್ಶಕ. ಆ ಭಾಷೆಯಲ್ಲಿ ಧನ್ಯವಾದ ಅಥವಾ ಕ್ಷಮಿಸಿ ಎಂಬಂತಹ ಸೌಜನ್ಯದ ನಕಲಿ ಪದಗಳೂ ಇಲ್ಲವಂತೆ. ಒಬ್ಬ ಗೆಳೆಯ ಬಂದು ಮೀನು ಕೊಟ್ಟರೆ, ಇವನು ಅದಕ್ಕೆ ಪ್ರತಿಯಾಗಿ ಥ್ಯಾಂಕ್ ಎಂದು ಹೇಳಿ ಋಣಮುಕ್ತನಾಗುವುದಿಲ್ಲ; ಬದಲಿಗೆ ಆ ಮೀನನ್ನು ಸುಟ್ಟು ಇಬ್ಬರೂ ಜತೆಯಾಗಿ ಹಂಚಿ ತಿನ್ನುತ್ತಾರೆ. ಕೃತಜ್ಞತೆಯನ್ನು ಪದಗಳಲ್ಲಿ ಕಟ್ಟಿ ಬಿಸಾಡುವ ಬದಲು, ಕ್ರಿಯೆಯಲ್ಲಿ ಬದುಕಿ ತೋರಿಸುವ ಆ ಸಂಸ್ಕೃತಿಯ ಮುಂದೆ ನಮ್ಮ ನಿಘಂಟುಗಳು ತಲೆತಗ್ಗಿಸಬೇಕು. ಪ್ರೀತಿಯನ್ನು ಹೇಳಲು ಐ ಲವ್ ಯು ಎಂಬ ಮೂರು ಪದಗಳ ಅಂಟಿಲ್ಲದೆ, ಕಣ್ಣ ಎಲ್ಲವನ್ನೂ ದಾಟಿಸುವ ಮುಗ್ಧತೆ ಅವರ ಮೈಮನಗಳಲ್ಲಿ ಹರಿಯುತ್ತದೆ.

ಪದಗಳು ಕಡಿಮೆಯಿದ್ದಷ್ಟೂ ಬದುಕಿನ ಮೌನ ಗಾಢವಾಗುತ್ತದೆ. ರಾತ್ರಿಯ ಕಾಡಿನಲ್ಲಿ ನಕ್ಷತ್ರಗಳ ಕೆಳಗೆ ಕುಳಿತಾಗ, ಸುತ್ತಲಿನ ಕೀಟಗಳ ಝೇಂಕಾರ, ಗಾಳಿಯ ಸದ್ದು ಮತ್ತು ಎದುರಿನ ಬೆಂಕಿಯ ಕೆನ್ನಾಲಿಗೆಯಷ್ಟೇ ಮುಖ್ಯವಾಗುತ್ತದೆ. ಅತಿಯಾದ ಭಾಷೆಯ ಹಂಗಿಲ್ಲದ ಆ ಜನರಿಗೆ ನಿದ್ರೆ ಚೆನ್ನಾಗಿ ಬರುತ್ತದೆ, ಕಣ್ಣುಗಳಲ್ಲಿ ನಂಜು ಇರುವುದಿಲ್ಲ. ಭಾಷೆಯೆಂಬುದು ಸಾಗರದ ಮೇಲೆ ತೇಲುವ ದೋಣಿಯಂತೆ; ದೋಣಿಯ ಮೇಲೆ ಸರಕು ಹೆಚ್ಚಾದಷ್ಟೂ ಅದು ಮುಳುಗುವ ಅಪಾಯ ಹೆಚ್ಚು. ಪಿರಾಹಾ ಜನ ತಮ್ಮ ದೋಣಿಯನ್ನು ತೀರ ಹಗುರವಾಗಿ ಇಟ್ಟುಕೊಂಡಿರುವುದರಿಂದಲೇ ಅವರು ಪ್ರಕೃತಿಯ ಅಲೆಗಳ ಮೇಲೆ ಸಲೀಸಾಗಿ ತೇಲುತ್ತಿದ್ದಾರೆ.

ಕೊನೆಗೂ ನಮಗೆ ಅನ್ನಿಸುವುದು ಇಷ್ಟೇ. ಬದುಕಲು ಮನುಷ್ಯನಿಗೆ ಎಷ್ಟು ಮಾತುಗಳು ಬೇಕು? ರೈಲ್ವೆ ಪ್ಲಾಟ್ ಫಾರ್ಮಿನಲ್ಲಿ ಅಮ್ಮನ ಕೈಹಿಡಿದು ನಿಂತ ಮಗುವಿಗೆ, ಸಂಜೆ ದಡದಲ್ಲಿ ಕೈಕೈ ಹಿಡಿದು ಕೂತ ಪ್ರೇಮಿಗಳಿಗೆ, ಕಣ್ಣ ಬೀಳ್ಕೊಡುವ ಮುದುಕ ಜೀವಗಳಿಗೆ ಪದಗಳ ಕೊರತೆ ಯಾವತ್ತೂ ಕಾಡುವುದೇ ಇಲ್ಲ. ಶಬ್ದಗಳು ಕೇವಲ ಮುಖವಾಡಗಳು. ಅದು ಕಳಚಿಬಿದ್ದಾಗ ಮಾತ್ರ ನಿಜವಾದ ಮನುಷ್ಯತ್ವ ಕಾಣಲು ಸಾಧ್ಯ.

ಪಿರಾಹಾದಂತಹ ಪುಟ್ಟ ಭಾಷೆಗಳು ನಾಗರಿಕತೆಯ ಗದ್ದಲದಲ್ಲಿ ಕಳೆದುಹೋದ ನಮಗೆ ಒಂದು ಎಚ್ಚರಿಕೆಯ ಕರೆಗಂಟೆಯಂತೆ; ಮಾತನಾಡುವುದನ್ನು ಕೊಂಚ ಕಡಿಮೆ ಮಾಡಿ, ಮೌನವನ್ನು, ಕಣ್ಣೋಟವನ್ನು, ಪ್ರಕೃತಿಯ ಉಸಿರನ್ನು ಆಲಿಸುವುದನ್ನು ಕಲಿಯಿರಿ ಎಂದು ಅವು ನಮಗೆ ಮೆಲುದನಿಯಲ್ಲಿ ಬೋಧಿಸುತ್ತಲೇ ಇರುತ್ತವೆ. ಹೀಗೆಂದರೆ ಏನರ್ಥ? ಅಮೆರಿಕದ ಮಹಾನ್ ಭಾಷಾವಿನಿಯೊಬ್ಬರು ಅತಿ ಕಡಿಮೆ ಪದಗಳಿರುವ ಅದೇ ಪಿರಾಹಾ ಕಾಡಿಗೆ ಬಂದಿಳಿದ ಪ್ರಸಂಗವೊಂದು ನೆನಪಾಗುತ್ತದೆ. ಕೈಯಲ್ಲಿ ದಪ್ಪ ನೋಟ್‌ಬುಕ್, ಕತ್ತಿನಲ್ಲಿ ಟೇಪ್ ರೆಕಾರ್ಡರ್, ಮುಖದಲ್ಲಿ ಇಡೀ ಬುಡಕಟ್ಟಿನ ಭಾಷೆಯನ್ನು ತಿಂಗಳಲ್ಲಿ ಕಲಿತು ನಿಘಂಟು ಬರೆದುಬಿಡುತ್ತೇನೆ ಎಂಬ ನಾಗರಿಕ ಜಂಬ. ಬುಡಕಟ್ಟಿನ ನಾಯಕನ ಬಳಿ ಹೋದ ಪ್ರೊಫೆಸರ್, ನದಿಯ ದಡದಲ್ಲಿ ಬಿದ್ದಿದ್ದ ಒಂದು ಮೀನನ್ನು ತೋರಿಸಿ, ತಮ್ಮ ಗಂಭೀರ ಧ್ವನಿಯಲ್ಲಿ, ಇದಕ್ಕೆ ನಿಮ್ಮ ಭಾಷೆಯಲ್ಲಿ ಏನೆನ್ನುತ್ತೀರಿ? ಎಂದು ಸನ್ನೆ ಮಾಡಿದರು. ನಾಯಕ ಕ್ಷಣಕಾಲ ಗಂಭೀರವಾಗಿ ಯೋಚಿಸಿ ಓಗಾ ಎಂದ.

ಪ್ರೊಫೆಸರ್ ಖುಷಿಯಿಂದ ಪುಸ್ತಕದಲ್ಲಿ ಮೀನು = ಓಗಾ ಎಂದು ಬರೆದುಕೊಂಡರು. ಸ್ವಲ್ಪ ಹೊತ್ತಿನ ನಂತರ, ಮರದ ಕೊಂಬೆಯ ಮೇಲೆ ಕುಳಿತಿದ್ದ ಹಕ್ಕಿಯನ್ನು ತೋರಿಸಿ, ಮತ್ತೆ ಇದಕ್ಕೆ? ಎಂದು ಕೇಳಿದರು. ನಾಯಕ ಮರದ ಕಡೆ ದಿಟ್ಟಿಸಿ ಮತ್ತೆ ಸಲೀಸಾಗಿ ಓಗಾ ಅಂದ. ಪ್ರೊಫೆಸರ್‌ಗೆ ತಲೆಕೆರೆದುಕೊಳ್ಳುವಂತಾಯಿತು. ಹಕ್ಕಿಗೂ ಓಗಾ? ಮೀನಿಗೂ ಓಗಾ? ಬಹುಶಃ ಪ್ರಾಣಿಗಳಿಗೆಲ್ಲ ಇವರಲ್ಲಿ ಒಂದೇ ಹೆಸರಿರಬೇಕು ಎಂದುಕೊಂಡು ಪ್ರಾಣಿ/ಪಕ್ಷಿ = ಓಗಾ ಎಂದು ತಿದ್ದಿ ಬರೆದುಕೊಂಡರು. ಇನ್ನಷ್ಟು ನಿಖರತೆ ಬೇಕೆಂದು, ನದಿಯ ನೀರನ್ನು ಅಂಗೈಯಲ್ಲಿ ತೆಗೆದು ತೋರಿಸಿ, ಹಾಗಾದರೆ ಈ ನೀರಿಗೆ ಏನಂತೀರಿ? ಎಂದು ಕೇಳಿದರು.

ನಾಯಕ ಮುಖದಲ್ಲಿ ಯಾವ ಭಾವನೆಯೂ ಇಲ್ಲದೆ ಮತ್ತದೇ ಶಬ್ದ ಉದುರಿಸಿದ – ಓಗಾ ಪ್ರೊಫೆಸರ್‌ಗೆ ಬೆವರು ಸುರಿಯಲು ಶುರುವಾಯಿತು. ಜಗತ್ತಿನ ಎಲ್ಲ ದೊಡ್ಡ ವಿಶ್ವವಿದ್ಯಾಲಯಗಳ ವ್ಯಾಕರಣ ಸೂತ್ರಗಳೆಲ್ಲ ಇಲ್ಲಿ ತಲೆಕೆಳಗಾಗುತ್ತಿದ್ದವು. ಸಿಟ್ಟಿಗೆದ್ದ ಅವರು ತನ್ನ ಜೇಬಿನಿಂದ ಬಣ್ಣದ ಪೆನ್ನೊಂದನ್ನು ತೆಗೆದು, ಇದಕ್ಕೂ ನಿಮ್ಮಲ್ಲಿ ಓಗಾ ಅಂತಾನೇ ಹೇಳ್ತಾರಾ? ಎಂದು ಕಿರಿಕಿರಿ ಧ್ವನಿಯಲ್ಲಿ ಕೇಳಿದರು. ಆಗ ನಾಯಕ ನಿಧಾನವಾಗಿ ಪ್ರೊಫೆಸರ್ ಹೆಗಲ ಮೇಲೆ ಕೈಯಿಟ್ಟು ಮುಗ್ಧವಾಗಿ ನಗುತ್ತಾ ಸನ್ನೆ ಮಾಡಿದ.

ಸ್ವಾಮಿ, ನೀವು ಅರ್ಧ ಗಂಟೆಯಿಂದ ತೋರಿಸುತ್ತಿರುವ ಆ ಎಲ್ಲ ವಸ್ತುಗಳಿಗೂ ನೂರಾರು ಬೇರೆಬೇರೆ ಹೆಸರುಗಳಿವೆ. ಆದರೆ ನೀವು ಪ್ರತಿಯೊಂದು ವಸ್ತುವಿನ ಕಡೆಗೂ ಮುಂಗೈ ಚಾಚಿ ತೋರಿಸುತ್ತಿದ್ದೀರಲ್ಲ, ನಮ್ಮ ಭಾಷೆಯಲ್ಲಿ ಆ ತೋರುಬೆರಳಿಗೆ ಓಗಾ ಅಂತಾರೆ! ಭಾಷೆಯ ಭಾರ ಹೊತ್ತ ಪ್ರೊಫೆಸರ್ ನೋಟ್ ಬುಕ್ ಮಡಿಚಿ ಜೇಬಿಗಿಳಿಸಿ, ಆ ಹಳ್ಳಿಗನ ಮುಂದೆ ಕೇವಲ ಒಂದು ಸಪ್ಪೆ ಮುಗುಳ್ನಗೆ ಚೆಲ್ಲಿ ಸುಮ್ಮನಾಗಬೇಕಾಯಿತು. ನಾಲಿಗೆ ಉದ್ದವಿದ್ದವರಿಗೆಲ್ಲ ಪ್ರಕೃತಿಯ ಕಣ್ಣೋಟ ಅರ್ಥವಾಗುವುದಿಲ್ಲ ಎನ್ನುವುದಕ್ಕೆ ಇದಕ್ಕಿಂತ ಚಂದದ ಪ್ರಸಂಗ ಬೇಕೆ?

**– ವಿಶ್ವೇಶ್ವರ ಭಟ್**

# ಪರಿಸರ ಸ್ನೇಹಿ ಗಣೇಶ ಮೂರ್ತಿ ಪ್ರತಿಷ್ಠಾಪನೆಗೆ ಸಲಹೆ

• ಪ್ರಜೋದಯ ವರದಿ



**ಹಾಸನ:** ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿಒಪಿ) ಹಾಗು ರಾಸಾಯನಿಕ ಬಣ್ಣಗಳಿಂದ ತಯಾರಿಸಿದ ಗಣೇಶ ವಿಗ್ರಹಗಳ ಬಳಕೆಯನ್ನು ತ್ಯಜಿಸಿ ಪರಿಸರ ಸ್ನೇಹಿ ಮಣ್ಣಿನ ಗಣಪತಿಯನ್ನು ಪೂಜಿಸುವ ಮೂಲಕ ಪರಿಸರ ಸಂರಕ್ಷಣೆಗೆ ಪ್ರತಿಯೊಬ್ಬರೂ ಕೈಜೋಡಿಸ ಬೇಕೆಂದು ಉಪವಿಭಾಗಾಧಿಕಾರಿ ಜಗದೀಶ್ ಗಂಗಣ್ಣನವರ್ ಅವರು ಸಲಹೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಪರಿಸರ ಸಂರಕ್ಷಣೆ ಹಾಗು ಪರಿಸರ ಸ್ನೇಹಿ ಗಣೇಶೋತ್ಸವ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಜಿಲ್ಲಾಡಳಿತ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಶ್ರೀ ವಿದ್ಯಾರಣ್ಯ ಮಹಾಗಣಪತಿ ಮಹೋತ್ಸವ ಸಮಿತಿ ಮತ್ತು ವಂದೇ ಮಾತರಂ ಗೆಳೆಯರ ಬಳಗದಿಂದ ಸೋಮವಾರ ಹಮ್ಮಿಕೊಂಡಿದ್ದ ಹಸಿರು ಪರಿಸರಕ್ಕಾಗಿ ಮ್ಯಾರಥಾನ್ ಕಾರ್ಯಕ್ರಮಕ್ಕೆ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

ಪ್ಲಾಸ್ಟಿಕ್ ಹಾಗು ರಾಸಾಯನಿಕ ಮಿಶ್ರಿತ ವಸ್ತುಗಳಿಂದ ತಯಾರಿಸಿದ ಗಣೇಶ ವಿಗ್ರಹಗಳನ್ನು ಬಳಸುವುದನ್ನು ತಪ್ಪಿಸಬೇಕು. ಪರಿಸರ ಸ್ನೇಹಿ ಮಣ್ಣಿನ ಗಣೇಶ ವಿಗ್ರಹಗಳನ್ನು ಬಳಸುವುದರಿಂದ ಜಲಮೂಲಗಳನ್ನು ಸಂರಕ್ಷಿಸಲು ಸಾಧ್ಯವಾಗುತ್ತದೆ. ಜೊತೆಗೆ ಪ್ರಾಣಿ, ಪಕ್ಷಿ ಸೇರಿ ಜೀವ ಸಂಕುಲ ಹಾಗು ಮಾನವ ಜೀವನದ ಮೇಲೆ ಪರಿಸರ ಮಾಲಿನ್ಯದಿಂದ ಉಂಟಾಗುವ ದುಷ್ಪರಿಣಾಮಗಳನ್ನು ತಡೆಯಲು ಸಹಕಾರಿಯಾಗಲಿದೆ ಎಂದು ಹೇಳಿದರು.

ಈ ಬಾರಿಯ ಗಣೇಶ ಚತುರ್ಥಿ ಸಂದರ್ಭದಲ್ಲಿ ಪ್ರತಿಯೊಬ್ಬರೂ ಪರಿಸರ ಸ್ನೇಹಿ ಗಣಪತಿಯನ್ನು ಮನೆಗೆ ತಂದು ಪೂಜಿಸಬೇಕು. ಪರಿಸರ ಸಂರಕ್ಷಣೆಯ ಸಂದೇಶವನ್ನು ಪ್ರತಿಯೊಬ್ಬರೂ ಪಾಲಿಸಬೇಕೆಂದರು.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಜಿಲ್ಲಾ ಅಧಿಕಾರಿ ಭಾಸ್ಕರ್ ಅವರು ಮಾತನಾಡಿ, ಮಣ್ಣಿನ ಗಣಪತಿ ಹಾಗು ಪರಿಸರ ಸ್ನೇಹಿ ಗಣೇಶೋತ್ಸವ ಆಚರಣೆಯ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ಮ್ಯಾರಥಾನ್ ಆಯೋಜಿಸಲಾಗಿದೆ. ಪರಿಸರ ಉಳಿಸುವುದು ಹಾಗು ಜಲಮೂಲಗಳನ್ನು ಸಂರಕ್ಷಿಸುವುದು ನಮ್ಮೆಲ್ಲರ ಜವಾಬ್ದಾರಿ. ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ತಯಾರಿಸಿದ ಗಣೇಶ ವಿಗ್ರಹಗಳನ್ನು ತ್ಯಜಿಸಿ, ಮಣ್ಣಿನಿಂದ ತಯಾರಿಸಿದ ಗಣಪತಿ ವಿಗ್ರಹಗಳನ್ನು ಬಳಸಬೇಕೆಂದು ಕರೆ ನೀಡಿದರು.

ಬ್ರಾಹ್ಮಣ ಮಹಾಸಭಾದ ಹೆಚ್.ಎಸ್.ಮಂಜುನಾಥ್ ಮೂರ್ತಿ ಅವರು ಮಾತನಾಡಿ, ಪರಿಸರ ಮಾಲಿನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ ಜಾಗೃತಿ ಕಾರ್ಯಕ್ರಮಗಳು ಹೆಚ್ಚಾಗಿ ನಡೆಯಬೇಕು. ಪರಿಸರ ಮಾಲಿನ್ಯದಿಂದ ಹಲವು ಜೀವಿಗಳಿಗೆ ಉಂಟಾಗುವ ಹಾನಿಯನ್ನು ತಪ್ಪಿಸುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ. ಗಣಪತಿಗೆ ನಿರ್ದಿಷ್ಟ ಆಕಾರವೇ ಇಲ್ಲ. ಯಾವ ರೂಪದಲ್ಲಿ ಪ್ರತಿಷ್ಠಾಪಿಸಿದರೂ ಅದು ಗಣಪತಿಯ ಆರಾಧನೆಯೇ ಆಗಿರುತ್ತದೆ. ಆದ್ದರಿಂದ ಪರಿಸರಕ್ಕೆ ಹಾನಿಯಾಗದ ರೀತಿಯಲ್ಲಿ ಮಣ್ಣಿನ ಗಣಪತಿಯನ್ನು ಬಳಸುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಂಗವಾಗಿ ಮಣ್ಣಿನ ಗಣಪತಿ ವಿಗ್ರಹ ತಯಾರಿಕೆ ಸ್ಪರ್ಧೆ ಏರ್ಪಡಿಸಲಾಗಿತ್ತು. ಪ್ರಥಮ ಬಹುಮಾನ 5 ಸಾವಿರ ರೂ., ದ್ವಿತೀಯ 3 ಸಾವಿರ ರೂ. ಹಾಗು ತೃತೀಯ ಬಹುಮಾನ 2 ಸಾವಿರ ರೂ. ನೀಡಿ ಪುರಸ್ಕರಿಸಲಾಯಿತು.

ಸೀತಾರಾಮಾಂಜನೇಯ ದೇವಾಲಯದ ಅಧ್ಯಕ್ಷ ಶ್ರೀನಾಥ್, ಅಖಿಲ ಭಾರತ ವೀರಶೈವ ಮಹಾಸಭಾದ ತಾಲ್ಲೂಕು ಅಧ್ಯಕ್ಷ ಕಟ್ಟಾಯ ಶಿವಕುಮಾರ್, ಪ್ರಣಾಮ್ ಭಾರಧ್ವಾಜ್, ರತೀ, ಕಲಾವಿದ ಬಿ.ಟಿ.ಮಾನವ ಇತರರಿದ್ದರು.

## ಮನೆ ಬೇಡವಾದರೆ ಹಕ್ಕುಪತ್ರ ವಾಪಾಸ್ ನೀಡಿ : ಕೆ.ಎಂ.ಶಿ.

» ಮೊದಲನೇ ಪುಟದಿಂದ

ಬದುಕು ಸಾಗಿಸುತ್ತಿವೆ. ಮತ್ತಷ್ಟು ಮನೆಗಳು ವಿತರಣೆಗೆ ಸಿದ್ಧವಾಗಿವೆ. ಸಾವಿರಾರು ಸಂಖ್ಯೆಯಲ್ಲಿ ಗುಂಪು ಮನೆಗಳು ನಿರ್ಮಾಣವಾಗುತ್ತಿರುವುದರಿಂದ ಮೂಲಸೌಕರ್ಯ ಕಲ್ಪಿಸಿಕೊಡಲು 11 ಕೋ.ರೂ. ಅನುದಾನ ಸಹ ಬಿಡುಗಡೆ ಮಾಡಲಾಗಿದೆ. ಈ ಬಡಾವಣೆಯು ಕೆಲವೇ ದಿನಗಳಲ್ಲಿ ರಾಜ್ಯದ ಮಾದರಿ ಬಡಾವಣೆಯಾಗುವುದರಲ್ಲಿ ಸಂದೇಹವಿಲ್ಲ. ಇದರ ಪ್ರಯೋಜನವನ್ನು ನಗರದ ವಸತಿ ರಹಿತರು ಪಡೆದುಕೊಳ್ಳುವ ಮೂಲಕ ಸ್ವಂತ ಮನೆಗಳನ್ನು ತಮ್ಮದಾಗಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಲಾಟರಿ ಮೂಲಕ ಫಲಾನುಭವಿಗಳ ಆಯ್ಕೆ ಮಾಡಲಾಯಿತು. ನಗರಸಭೆ ಪೌರಾಯುಕ್ತ ಕೃಷ್ಣಮೂರ್ತಿ, ಮಾಜಿ ಉಪಾಧ್ಯಕ್ಷ ಮನೋಹರ ಮೇಸ್ತ್ರಿ, ಆಶ್ರಯ ಸಮಿತಿ ಸದಸ್ಯರಾದ ಶ್ರೀನಿವಾಸ್ ,ಅಣ್ಣಾದೊರೆ, ಅಮ್ಜದ್ ಪಾಷಾ, ನಗರಸಭೆ ಮಾಜಿ ಸದಸ್ಯರಾದ ವೆಂಕಟಮುನಿ, ದರ್ಶನ್ ಮೊದಲಾದವರಿದ್ದರು.

## ಜಿಲ್ಲೆಯ ಇಬ್ಬರಿಗೆ ಕೆಂಪೇಗೌಡ ಪ್ರಶಸ್ತಿ




**ಹಾಸನ:** ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ ಭವನ ಕುವೆಂಪು ಸಭಾಂಗಣದಲ್ಲಿ ಸಮರ್ಥ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ಭಾನುವಾರ ಹಮ್ಮಿಕೊಂಡಿದ್ದ ನಾಡಪ್ರಭು ಕೆಂಪೇಗೌಡ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಜಿಲ್ಲೆಯ ಇಬ್ಬರು ಪ್ರಶಸ್ತಿಗೆ ಭಾಜನರಾಗಿದ್ದಾರೆ. ಸಾಮಾಜಿಕ ಕಾರ್ಯ ವಿಭಾಗದಲ್ಲಿ ತಣ್ಣೀರುಹಳ್ಳ ಮೋಹನ್ ಕುಮಾರ್ ಹಾಗೂ ಸಂಗೀತ ಕ್ಷೇತ್ರದಲ್ಲಿ ವಾಣಿ ನಾಗೇಂದ್ರ ಪ್ರಶಸ್ತಿ ಪಡೆದುಕೊಂಡಿದ್ದಾರೆ. ಬೇಲಿಮಠ ಮಹಾಸಂಸ್ಥಾನದ ಶಿವಾನುಭವ ಚರಮೂರ್ತಿ ಶ್ರೀ ಶಿವರುದ್ರ ಸ್ವಾಮೀಜಿ, ಪ್ರತಿಷ್ಠಾನದ ಅಧ್ಯಕ್ಷ ಎಸ್.ಆರ್.ವಿಜಯ ಸಮರ್ಥ, ಪ್ರೊ.ಎ.ಆರ್.ಶಿವಕುಮಾರ, ಶಿವಾನಂದ ತಗಡೂರು, ಭಾರತಿ ಎಂ.ಪ್ರಕಾಶ್, ರಾಜು ಚಲವಾದಿ, ಸಿ.ಯು.ಮಂಜುನಾಥ ಇತರರು ಪ್ರಶಸ್ತಿ ಪ್ರದಾನ ಮಾಡಿದರು.

## ನದಿ ಪಾಲಾಗುತ್ತಿರುವ 4,500 ಕ್ಯೂಸೆಕ್ ಹೇಮಾವತಿ ನೀರು

» ಮೊದಲನೇ ಪುಟದಿಂದ

ಹೊರಗೆ ಬಿಡುವ ಕ್ರಮಕ್ಕೆ ವಿರೋಧ ವ್ಯಕ್ತವಾಗುತ್ತಿದೆ.

ಹೇಮಾವತಿ ಜಲಾಶಯದಿಂದ ನದಿಗೆ ಹರಿಸುವ ನೀರಿನ ಪ್ರಮಾಣವೂ ದಿನದಿಂದ ದಿನಕ್ಕೆ ಹೆಚ್ಚಳವಾಗಿದೆ. ಆ.9ರಿಂದ 19ರ ವರೆಗೆ ಪ್ರತಿದಿನ 500 ಕ್ಯೂಸೆಕ್ ನೀರನ್ನು ನದಿಗೆ ಬಿಡಲಾಗುತ್ತಿತ್ತು. ಆ.20 ಮತ್ತು 21ರಂದು 800 ಕ್ಯೂಸೆಕ್, ಆ.22ರಿಂದ 30ರವರೆಗೆ 1,800 ಕ್ಯೂಸೆಕ್ ನೀರನ್ನು ಹರಿಸಲಾಯಿತು. ಆ.31 ರಂದು ಹೊರಹರಿವನ್ನು 2,075 ಕ್ಯೂಸೆಕ್‌ಗೆ ಹೆಚ್ಚಿಸಲಾಯಿತು. ಸೆ.1 ಮತ್ತು 2ರಂದು 4,000 ಕ್ಯೂಸೆಕ್‌ವರೆಗೆ ನೀರನ್ನು ನದಿಗೆ ಬಿಡಲಾಗಿದ್ದು, ಸೆ.3ರಿಂದ ಸತತವಾಗಿ 4,500 ಕ್ಯೂಸೆಕ್ ನೀರು ನದಿಗೆ ಹರಿಸಲಾಗುತ್ತಿದೆ.

ಇದರ ಜೊತೆಗೆ ಹೇಮಾವತಿ ಎಡದಂಡೆ ಹಾಗು ಬಲದಂಡೆ ನಾಲೆಗಳ ಮೂಲಕ ಹಾಸನ, ತುಮಕೂರು ಮತ್ತು ಮಂಡ್ಯ ಜಿಲ್ಲೆಗಳ ಜನ ಜಾನುವಾರುಗಳ ಕುಡಿಯುವ ನೀರು ಹಾಗು ಕೆರೆಗಳನ್ನು ತುಂಬಿಸುವ ಉದ್ದೇಶದಿಂದ ಪ್ರತಿ ದಿನ ಸುಮಾರು 5,650 ಕ್ಯೂಸೆಕ್‌ವರೆಗೆ ನೀರು ಹರಿಸಲಾಗುತ್ತಿದೆ.

**ಒಳ ಹರಿವು ಕುಸಿತ, ಹೊರ ಹರಿವು ಏರಿಕೆ**

ಈ ಬಾರಿ ಮುಂಗಾರು ಕೈಕೊಟ್ಟ ಪರಿಣಾಮ ಜಲಾಶಯಕ್ಕೆ ಬರುತ್ತಿರುವ ಒಳಹರಿವಿನಲ್ಲಿ ಗಣನೀಯ ಕುಸಿತ ಕಂಡುಬಂದಿದೆ. ಮಳೆಯ ಕೊರತೆಯಿಂದ ಒಳಹರಿವು ಕಡಿಮೆಯಾಗಿದ್ದರೂ, ಜಲಾಶಯದಿಂದ ಹೊರಗೆ ಬಿಡುತ್ತಿರುವ ನೀರಿನ ಪ್ರಮಾಣ ಮಾತ್ರ ಹೆಚ್ಚುತ್ತಲೇ ಇದೆ. ಇದು ಮುಂದಿನ ದಿನಗಳಲ್ಲಿ ಜಲಾಶಯದ ನೀರಿನ ಲಭ್ಯತೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ಮಳೆ ಮತ್ತೆ ಕೈಕೊಟ್ಟರೆ ಬೇಸಿಗೆಯಲ್ಲಿ ಹಾಸನ ಸೇರಿ ಹಲವು ಪ್ರದೇಶ ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗ ಬಹುದೆಂಬ ಆತಂಕ ಸಾರ್ವಜನಿಕರಲ್ಲಿ ಮೂಡಿದೆ.

**ಜಲಾಶಯದ ನೀರಿನ ಮಟ್ಟವೂ ಕುಸಿತ**

ಹೇಮಾವತಿ ಜಲಾಶಯದ ಗರಿಷ್ಠ ನೀರಿನ ಮಟ್ಟ 2,922 ಅಡಿಗಳು. ಸೋಮವಾರ ಜಲಾಶಯದ ನೀರಿನ ಮಟ್ಟ 2,908.28 ಅಡಿಗಳಷ್ಟಿದೆ. 37.103 ಟಿಎಂಸಿ ಗರಿಷ್ಠ ನೀರು ಸಂಗ್ರಹ ಸಾಮರ್ಥ್ಯ ಹೊಂದಿರುವ ಜಲಾಶಯದಲ್ಲಿ ಪ್ರಸ್ತುತ 25.404 ಟಿಎಂಸಿ ನೀರು ಮಾತ್ರ ಇದೆ. ಜಲಾಶಯಕ್ಕೆ 4,052 ಕ್ಯೂಸೆಕ್ ಒಳಹರಿವು ಇದ್ದು, ನದಿಗೆ 4,500 ಕ್ಯೂಸೆಕ್ ಹಾಗೂ ನಾಲೆಗಳಿಗೆ 5,650 ಕ್ಯೂಸೆಕ್ ನೀರನ್ನು ಹೊರಬಿಡಲಾಗುತ್ತಿದೆ. ಒಳಹರಿವಿಗಿಂತಲೂ ಹೊರಹರಿವಿನ ಪ್ರಮಾಣ ಹೆಚ್ಚಿರುವುದು ಗಮನಾರ್ಹವಾಗಿದೆ.

2025ರ ಇದೇ ದಿನಕ್ಕೆ ಹೋಲಿಸಿದರೆ ಈ ಬಾರಿ ಜಲಾಶಯದ ಸ್ಥಿತಿ ವ್ಯತ್ಯಾಸವಾಗಿದೆ. ಕಳೆದ ವರ್ಷ ಇದೇ ದಿನ ಜಲಾಶಯದ ನೀರಿನ ಮಟ್ಟ 2,921.87 ಅಡಿಗಳಿದ್ದು, 36.977 ಟಿಎಂಸಿ ನೀರು ಸಂಗ್ರಹವಾಗಿತ್ತು. 7,735 ಕ್ಯೂಸೆಕ್ ಒಳಹರಿವು ಬರುತ್ತಿತ್ತು. 7,400 ಕ್ಯೂಸೆಕ್ ನೀರನ್ನು ಹೊರಬಿಡಲಾಗುತ್ತಿತ್ತು. ಈ ವರ್ಷ ನೀರಿನ ಮಟ್ಟ 2,908.28 ಅಡಿಗಳಿಗೆ ಇಳಿದಿದ್ದು, ಸಂಗ್ರಹ 25.404 ಟಿಎಂಸಿಗೆ ಕುಸಿದಿದೆ. ಒಳಹರಿವು 4,052 ಕ್ಯೂಸೆಕ್‌ಗೆ ಇಳಿದಿದ್ದರೂ, ಹೊರಹರಿವು ಮಾತ್ರ 10,150 ಕ್ಯೂಸೆಕ್‌ಗೆ ತಲುಪಿದೆ.

# ಮೂಲಸೌಲಭ್ಯಕ್ಕಾಗಿ ವಿದ್ಯಾರ್ಥಿಗಳ ಪ್ರತಿಭಟನೆ

• ಪ್ರಜೋದಯ ವರದಿ



**ಹಾಸನ:** ನಗರದ ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮೂಲಸೌಕರ್ಯ ಕಲ್ಪಿಸದೆ ಅನ್ಯಾಯ ಮಾಡಲಾಗುತ್ತಿದೆ ಎಂದು ಆರೋಪಿಸಿ ಎಐಡಿಎಸ್‌ಒ ನೇತೃತ್ವದಲ್ಲಿ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಹೇಮಾವತಿ ಪ್ರತಿಮೆಯಿಂದ ಮೆರವಣಿಗೆಯಲ್ಲಿ ಬಂದ ಪ್ರತಿಭಟನಾಕಾರರು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು. ಎಐಡಿಎಸ್‌ಒ ರಾಜ್ಯ ಖಜಾಂಚಿ ಸುಭಾಷ್ ಬೆಟ್ಟದಕೊಪ್ಪ ಅವರು ಮಾತನಾಡಿ, ನಗರದ ಅಪೂರ್ವ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ. ಬಿ.ಆರ್. ಅಂಬೇಡ್ಕರ್ ಬಾಲಕಿಯರ ವಿದ್ಯಾರ್ಥಿ ನಿಲಯದ ಸುಮಾರು 110 ವಿದ್ಯಾರ್ಥಿನಿಯರು ಅಗತ್ಯ ಮೂಲಭೂತ ಸೌಲಭ್ಯಗಳಿಲ್ಲದೆ ಪ್ರತಿದಿನ ತೊಂದರೆ ಅನುಭವಿಸುತ್ತಿದ್ದಾರೆ. ವಿದ್ಯಾರ್ಥಿನಿಯರಿಗೆ ಚಪ್ಪಲಿ ಸ್ಟ್ಯಾಂಡ್, ಬೆಡ್ ಹಾಗು ಕಾಟ್‌ಗಳಂತಹ ಕನಿಷ್ಟ ಸೌಲಭ್ಯಗಳನ್ನೂ ಒದಗಿಸಿಲ್ಲ. ಸಮಸ್ಯೆ ಕುರಿತು ವಾರ್ಡನ್ ಹಾಗು ಅಧಿಕಾರಿಗಳಿಗೆ ಮೊದಲೇ ಮನವಿ ಸಲ್ಲಿಸಲಾಗಿದೆ. 15 ದಿನಗಳೊಳಗಾಗಿ ಮೂಲಸೌಕರ್ಯ ಕಲ್ಪಿಸುವ ಭರವಸೆ ನೀಡಿದ್ದರಾದರೂ ಯಾವುದೇ ಪ್ರಗತಿಯಾಗಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

ಹಾಸ್ಟೆಲ್‌ನಲ್ಲಿ ಸೊಳ್ಳೆ ಕಾಟ ಹೆಚ್ಚಾಗಿದ್ದು, ಉಸಿರು ಗಟ್ಟುವಂತಹ ವಾತಾವರಣ ನಿರ್ಮಾಣವಾಗಿದೆ. ಅದರಿಂದ ವಿದ್ಯಾರ್ಥಿನಿಯರ ಆರೋಗ್ಯ, ಶಿಕ್ಷಣ ಹಾಗು ಮಾನಸಿಕ ನೆಮ್ಮದಿಯ ಮೇಲೂ ಗಂಭೀರ ಪರಿಣಾಮ ಬೀರುತ್ತಿದೆ. ಕನಿಷ್ಟ ಮೂಲಸೌಲಭ್ಯ ಒದಗಿಸುವುದು ಸರ್ಕಾರ ಹಾಗು ಸಂಬಂಧಪಟ್ಟ ಇಲಾಖೆಯ ಜವಾಬ್ದಾರಿ. ಅಧಿಕಾರಿಗಳು ಈ ಸಮಸ್ಯೆಗಳನ್ನು ಪದೇ ಪದೇ ನಿರ್ಲಕ್ಷಿಸುತ್ತಿರುವುದು ಖಂಡನೀಯವೆಂದರು.

ವಿದ್ಯಾರ್ಥಿನಿಯರ ಸಮಸ್ಯೆಗಳನ್ನು ಪರಿಹರಿಸುವುದು ಅಧಿಕಾರಿಗಳ ದಯೆಯಲ್ಲ. ಅದು ಅವರ ಜವಾಬ್ದಾರಿ. ಹೋರಾಟದ ಸಂದರ್ಭದಲ್ಲಿ ನೀಡಿದ ಆಶ್ವಾಸನೆಗಳನ್ನು ಈಡೇರಿಸದೆ ವಿದ್ಯಾರ್ಥಿನಿಯರ ತಾಳ್ಮೆಯನ್ನು ಪರೀಕ್ಷಿಸುವುದನ್ನು ಅಧಿಕಾರಿಗಳು ಕೂಡಲೇ ನಿಲ್ಲಿಸಬೇಕು. ಜಿಲ್ಲಾಧಿಕಾರಿ ಹಾಗು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ವಾಸ್ತವ ಪರಿಸ್ಥಿತಿ ಪರಿಶೀಲಿಸಬೇಕು. ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಕೂಡಲೇ ಒದಗಿಸಿ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಎಐಡಿಎಸ್‌ಒ ಜಿಲ್ಲಾಧ್ಯಕ್ಷೆ ಚೈತ್ರ,ಕಾರ್ಯದರ್ಶಿ ಸುಷ್ಮಾ,ಉಪಾಧ್ಯಕ್ಷ ಅಭಿಷೇಕ್ ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಸೋಲು-ಗೆಲುವು ಸಮಾನವಾಗಿ ಸ್ವೀಕರಿಸಿ: ಶಂಭುನಾಥ ಶ್ರೀ

• ಪ್ರಜೋದಯ ವರದಿ



**ಬೇಲೂರು:** ಕ್ರೀಡೆಯಲ್ಲಿ ಸೋಲು-ಗೆಲುವು ಸಹಜ. ಗೆಲುವು ಬಂದಾಗ ಅಹಂಕಾರ ಪಡದೆ, ಸೋತಾಗ ಕುಗ್ಗದೆ ಎರಡನ್ನೂ ಸಮಾನವಾಗಿ ಸ್ವೀಕರಿಸುವ ಮನೋಭಾವವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳ ಬೇಕೆಂದು ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಹೇಳಿದರು.

ಪಟ್ಟಣದ ಬಿಜಿಎಸ್ ವಿಜ್ಞಾನ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಆಯೋಜಿಸಿದ್ದ 2026-27ನೇ ಸಾಲಿನ ತಾಲ್ಲೂಕು ಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟದಲ್ಲಿ ಆಶೀರ್ವಚನ ನೀಡಿದರು.

ದೈಹಿಕ ಆರೋಗ್ಯದ ಜೊತೆಗೆ ಮಾನಸಿಕ ಸ್ಥಿರತೆಗೂ ಕ್ರೀಡೆ ಅವಶ್ಯಕ. ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಆಸಕ್ತಿ ಬೆಳೆಸಿಕೊಂಡು ಶ್ರಮಪಟ್ಟು ಸಾಧನೆ ಮಾಡಬೇಕು. ತಾಲ್ಲೂಕು ಮಟ್ಟದಿಂದ ಜಿಲ್ಲೆ, ರಾಜ್ಯ ಹಾಗು ರಾಷ್ಟ್ರ ಮಟ್ಟದವರೆಗೆ ಆಯ್ಕೆಯಾಗುವ ಗುರಿ ಹೊಂದ ಬೇಕು. ಕ್ರೀಡಾ ಕ್ಷೇತ್ರದಲ್ಲಿರುವ ಅವಕಾಶ ಸದುಪಯೋಗಪಡಿಸಿಕೊಂಡು ತಂದೆ-ತಾಯಿ, ಶಿಕ್ಷಣ ಸಂಸ್ಥೆ ಹಾಗು ತಾಲ್ಲೂಕಿಗೆ ಕೀರ್ತಿ ತರಬೇಕೆಂದು ಕರೆ ನೀಡಿದರು.

ಗೆಲುವನ್ನು ತಲೆಗೆ ಏರಿಸಿಕೊಳ್ಳಬಾರದು, ಸೋಲನ್ನು ಹೃದಯಕ್ಕೆ ಇಳಿಸಿಕೊಳ್ಳಬಾರದು ಎಂಬ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಅವರ ಸಂದೇಶವನ್ನು ವಿದ್ಯಾರ್ಥಿಗಳು ಅಳವಡಿಸಿ ಕೊಳ್ಳಬೇಕು. ಗೆದ್ದವರು ಸೋತವರನ್ನು ಪ್ರೋತ್ಸಾಹಿಸಿ ಪರಸ್ಪರ ಗೌರವದಿಂದ ನಡೆಸಿಕೊಳ್ಳಬೇಕೆಂದರು.

ಶಾಸಕ ಹೆಚ್.ಕೆ.ಸುರೇಶ್ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕ್ರೀಡೆ ವಿದ್ಯಾರ್ಥಿಗಳ ದೈಹಿಕ ಹಾಗು ಮಾನಸಿಕ ಬೆಳವಣಿಗೆಗೆ ಪೂರಕ ಕ್ಷೇತ್ರ. ತಾಲ್ಲೂಕು ಮಟ್ಟದ ಕ್ರೀಡಾ ಕೂಟದಲ್ಲಿ ಭಾಗವಹಿಸಿರುವ ಪ್ರತಿಯೊಬ್ಬ ಕ್ರೀಡಾ ಪಟುವೂ ಗೆಲುವಿನ ಗುರಿಯೊಂದಿಗೆ ಶ್ರಮಿಸ ಬೇಕು. ಸೋಲು ಎದುರಾದರೂ ಧೈರ್ಯ ಕಳೆದು ಕೊಳ್ಳದೆ ಮುಂದಿನ ಅವಕಾಶಕ್ಕಾಗಿ ಮತ್ತಷ್ಟು ಪರಿಶ್ರಮಿಸಬೇಕೆಂದು ಹೇಳಿದರು.

ವಿದ್ಯಾರ್ಥಿಗಳು ತಾಲ್ಲೂಕು ಮಟ್ಟದಲ್ಲಿ ಉತ್ತಮ ಸಾಧನೆ ಮಾಡಿ ಜಿಲ್ಲಾ ಹಾಗು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಬೇಕು. ಕ್ರೀಡೆಯಲ್ಲಿ ಸಾಧನೆ ಮಾಡುವ ವಿದ್ಯಾರ್ಥಿಗಳಿಗೆ ಉತ್ತಮ ಭವಿಷ್ಯ ಇದೆ. ಆದ್ದರಿಂದ ಪೋಷಕರು ಹಾಗು ಶಿಕ್ಷಕರು ಮಕ್ಕಳ ಕ್ರೀಡಾ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸ ಬೇಕೆಂದರು.

ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ಅವರು ಮಾತನಾಡಿ, ಸೋಲನ್ನು ಸಾಧನೆಯ ಮೆಟ್ಟಿಲಾಗಿಸಿಕೊಳ್ಳಿ ಎಂದು ಕರೆ ನೀಡಿದರು.

ಹೆಚ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಎಂ.ಎ. ನಾಗರಾಜು, ಕ್ಷೇತ್ರ ಶಿಕ್ಷಣಾಧಿಕಾರಿ ಭಾಗ್ಯಮ್ಮ, ರೋಟರಿ ಕ್ಲಬ್ ಅಧ್ಯಕ್ಷ ಬಿ.ಬಿ.ಶಿವರಾಜು, ಉಪನ್ಯಾಸಕರ ಸಂಘದ ಅಧ್ಯಕ್ಷ ಪ್ರಕಾಶ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಸಿ.ಎಸ್.ಪ್ರಕಾಶ್, ಬಿಜಿಎಸ್ ಪದವಿ ಪೂರ್ವ ಕಾಲೇಜಿನ ದಿವ್ಯ ಕುಮಾರ್, ಪದವಿ ಪೂರ್ವ ಕಾಲೇಜಿನ ಅಧ್ಯಕ್ಷ ಪ್ರಕಾಶ್ ಮತ್ತಿತರರಿದ್ದರು.

## ವಂಚಿಸಿ ಪರಾರಿಯಾಗಿದ್ದ ಯುವಕನ ಕರೆತಂದು ವಿವಾಹ

• ಪ್ರಜೋದಯ ವರದಿ



**ಆಲೂರು:** ಮದುವೆಯಾಗುವುದಾಗಿ ನಂಬಿಸಿ ಒಂದು ವರ್ಷ ಯುವತಿಯೊಂದಿಗೆ ಜೊತೆಗಿದ್ದು, ಹೆಣ್ಣುಮಗು ಜನಿಸಿದ ಬಳಿಕ ತಲೆಮರೆಸಿಕೊಂಡಿದ್ದ ಯುವಕನನ್ನು ಪೊಲೀಸರು ಪತ್ತೆಹಚ್ಚಿ ಕರೆತಂದು ವಿವಾಹ ಮಾಡಿಸಿರುವ ಘಟನೆ ಪಟ್ಟಣದಲ್ಲಿ ನಡೆದಿದೆ.

ತಾಲ್ಲೂಕಿನ ಬೀರಕನಹಳ್ಳಿ ಗ್ರಾಮದ ರಾಜು ಹಾಗು ನಿಲುವಾಗಿಲು ಗ್ರಾಮದ ಅನ್ನಪೂರ್ಣ ಪರಸ್ಪರ ಪ್ರೀತಿಸುತ್ತಿದ್ದರು. ಮದುವೆಯಾಗುವುದಾಗಿ ಭರವಸೆ ನೀಡಿದ್ದ ರಾಜು, ಒಂದು ವರ್ಷ ಜೊತೆಗಿದ್ದು, ಈ ಅವಧಿಯಲ್ಲಿ ಹೆಣ್ಣು ಮಗುವಿಗೆ ಜನ್ಮ ನೀಡಿದ್ದಳು. ಮದುವೆಯಾಗುವ ಮುನ್ನವೇ ರಾಜು ಯುವತಿ ಹಾಗು ಮಗುವನ್ನು ಬಿಟ್ಟು ತಲೆಮರೆಸಿ ಕೊಂಡಿದ್ದ. ಅದರಿಂದ ನೊಂದ ಅನ್ನಪೂರ್ಣ ಆಲೂರು ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ದೂರು ದಾಖಲಿಸಿಕೊಂಡ ಪೊಲೀಸರು ರಾಜುಗಾಗಿ ಹುಡುಕಾಟ ನಡೆಸಿ ಆತನನ್ನು ಪತ್ತೆಹಚ್ಚಿ ಠಾಣೆಗೆ ಕರೆತಂದಿದ್ದಾರೆ. ಬಳಿಕ ಪೊಲೀಸರು ಹಾಗು ಡಿಎಸ್‌ಎಸ್ ಮುಖಂಡರು ಇಬ್ಬರನ್ನೂ ಮನವೊಲಿಸಿ ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ಎದುರು ವಿವಾಹ ನೆರವೇರಿಸಿದ್ದಾರೆ.

## ನೈಸ್: ಜೆಡಿಎಸ್-ಸರ್ಕಾರ ವಾಕ್ಸಮರ

» ಮೊದಲನೇ ಪುಟದಿಂದ

ಪತ್ರಕ್ಕೆ ಪ್ರತಿಕ್ರಿಯಿಸಿರುವ ಡಿ.ಕೆ.ಶಿವಕುಮಾರ್ ಅವರು, ನೈಸ್ ಯೋಜನೆ ವಿಚಾರದಲ್ಲಿ ಕಾನೂನು ಚೌಕಟ್ಟಿನಲ್ಲೇ ಕೆಲಸ ಮಾಡುತ್ತಿದ್ದೇವೆ. ಈ ವಿಚಾರದಲ್ಲಿ ಕಾನೂನು ಅಭಿಪ್ರಾಯವನ್ನು ಪಡೆದುಕೊಂಡಿದ್ದೇವೆ. ಬೇಕಾದರೆ ದೇವೇಗೌಡ ಅವರು ಕೋರ್ಟ್‌ಗೆ ಹೋಗಲಿ, ಉಪವಾಸ ಮಾಡಲಿ ಎಂದು ತಿರುಗೇಟು ನೀಡಿದ್ದಾರೆ.

ನಿಮ್ಮ ವೈಯಕ್ತಿಕ ಅಭಿಪ್ರಾಯಗಳು ಹಾಗು ಚರ್ಚೆಗಳನ್ನು ನಾನು ಮೊದಲಿನಿಂದಲೂ ನೋಡಿದ್ದೇನೆ. ಯಾವ ಒಪ್ಪಂದಕ್ಕೆ ಸಹಿ ಹಾಕಲಾಗಿದೆಯೋ, ಅದೇ ಹಾದಿಯಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಯಾರು ಆಸ್ತಿ ಕಳೆದುಕೊಂಡಿದ್ದಾರೋ ಅವರನ್ನು ರಕ್ಷಣೆ ಮಾಡಬೇಕು ಅಲ್ಲವೇ. ಈ ವಿಚಾರಕ್ಕೆ ಸಂಬಂಧಿಸಿದಂತೆ ಈ ಹಿಂದೆ ಸರ್ಕಾರಗಳು ಮಾಡಿಕೊಂಡಿರುವ ಒಪ್ಪಂದಗಳನ್ನೆಲ್ಲಾ ಪರಿಶೀಲಿಸಿದ್ದೇನೆಂದು ಸ್ಪಷ್ಟಪಡಿಸಿದರು.



**ಶಿವಮೊಗ್ಗಾ: ರಾಜ್ಯದಲ್ಲಿ ನಿಗದಿಪಡಿಸಿರುವ ಸಂಖ್ಯೆಗಿಂತ ಹೆಚ್ಚಿನ ವಿದ್ಯಾರ್ಥಿಗಳ ದಾಖಲಾತಿ ಕಂಡುಬಂದಿರುವ ಕಾರಣ ಇನ್ನಷ್ಟು ಕರ್ನಾಟಕ ಪಬ್ಲಿಕ್ ಶಾಲೆಗಳನ್ನು (ಕೆಪಿಎಸ್) ಆರಂಭಿಸಲು ಸರ್ಕಾರ ಕ್ರಮ ಕೈಗೊಂಡಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಮಧು ಬಂಗಾರಪ್ಪ ಅವರು ತಿಳಿಸಿದರು.**

# ಲಕ್ಷಾಂತರ ಜನರ ಬದುಕಿಗೆ ಬೆಳಕಾದ ಗೋವಿಂದೇಗೌಡರು

» ಮೊದಲನೇ ಪುಟದಿಂದ

ಶಿಕ್ಷಣ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆ ತಂದವರು ಹೆಚ್.ಜಿ.ಗೋವಿಂದೇಗೌಡರು. 1990ರ ದಶಕ ದಲ್ಲಿ ಡಿ.ಇಡಿ ವೃತ್ತಿ ತರಬೇತಿಯನ್ನು ಪರಿಚಯಿಸಿ ಹೆಚ್ಚು ಶಿಕ್ಷಕರು ಸರ್ಕಾರಿ ಕೆಲಸ ಪಡೆಯಲು ಕಾರಣಕರ್ತರಾದರು. ಶಿಕ್ಷಣ ಪಡೆದು ವಯೋಮಿತಿ ಮೀರುವ ಹಂತದಲ್ಲಿದ್ದವರಿಗೆ ತಕ್ಷಣ ನೇಮಕಾತಿ ಮಾಡಿಕೊಳ್ಳುವ ಮೂಲಕ ಕ್ರಾಂತಿಕಾರಕ ಬದಲಾವಣೆ ತಂದಿದ್ದಾರೆಂದರು. ಗೋವಿಂದೇಗೌಡರು ಅಪಾರ ದೈವ ಭಕ್ತರು, ಶ್ರದ್ಧೆಯುಳ್ಳವರೂ ಆಗಿದ್ದರು. ಜೊತೆಗೆ ವೈಜ್ಞಾನಿಕತೆಯನ್ನು ರೂಢಿಸಿಕೊಂಡಿದ್ದರು. ಅಪ್ಪಟ ತಾಜಾತನ, ಕೆಲಸದಲ್ಲಿ ಬದ್ಧತೆ, ನಿಷ್ಠುರ ವ್ಯಕ್ತಿತ್ವ, ಸರಳತನವನ್ನು ಅವರು ಹೊಂದಿದ್ದರೆಂದು ಕೊಂಡಾಡಿದರು.

ಗೋವಿಂದೇಗೌಡರು ನನ್ನ ಬಗ್ಗೆ ಬರೆಯಿರಿ ಎಂದು ಪತ್ರಕರ್ತರಿಗೆ ಅರ್ಧ ಲೋಟ ಕಾಫಿ ಕುಡಿಸಿದವರಲ್ಲ. ಅವರ ಬಗ್ಗೆ ಹೆಚ್ಚು ಪತ್ರಕರ್ತರು ಸಕಾರಾತ್ಮಕವಾಗಿ ಬರೆದರು. ಕಡಿದಾಳ್ ಮಂಜಪ್ಪ ಅವರು ನನ್ನ ಮುಂದಿನ ಉತ್ತರಾಧಿಕಾರಿ ಗೋವಿಂದೇ ಗೌಡರೇ ಎಂದು ಹೈಕಮಾಂಡ್‌ಗೆ ಶಿಫಾರಸ್ಸು ಪತ್ರ ಬರೆದಿದ್ದರು. ಆದರೆ, ಅದು ಕಾರ್ಯಗತವಾಗಲಿಲ್ಲ. ಈ ಸತ್ಯವನ್ನು ಮಂಜಪ್ಪ ಅವರು ಆತ್ಮಕಥೆಯಲ್ಲಿ ದಾಖಲಿಸಿ ದ್ದಾರೆಂದರು.

ಇಂದು ನಿಯಮ ಮುರಿದು ಬಾಳುವ ವರ ಸಂಖ್ಯೆ ಹೆಚ್ಚಾಗಿದೆ. ಈಗಿನ ರಾಜಕಾರಣಿ ಗಳು ನಿವೃತ್ತಿ ಒಲ್ಲರು, ಅದಕ್ಕೆ ಗೋವಿಂದೇ ಗೌಡರು ಅಪವಾದ. ಅವರದು ಭ್ರಷ್ಟಾಚಾರದ ವಿರುದ್ಧ ಗಟ್ಟಿ ಆಕ್ರೋಶದ ದನಿಯಾ ಗಿತ್ತು. ಸಮಯ ಪಾಲನೆ ಮಾಡುತ್ತಿದ್ದರೆಂದು ವಿವರಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಗೋವಿಂದೇಗೌಡರ ಪುತ್ರ, ಲಯನ್ಸ್‌ಮಾಜಿ ರಾಜ್ಯಪಾಲ ಹೆಚ್.ಜಿ.ವೆಂಕಟೇಶ್ ಅವರು ಮಾತನಾಡಿ, ತಂದೆ ಅಧಿಕಾರದಲ್ಲಿದ್ದಾಗಲೇ ರಾಜಕೀಯ ನಿವೃತ್ತಿ ಪಡೆದರು. ಶಿಕ್ಷಣ ಸಚಿವರಾಗಿ ಪಾರದರ್ಶಕ ಕೆಲಸ ಮಾಡಿದ್ದಾರೆ. ಅವರು ಸಚಿವರಾಗಿದ್ದಾಗ ಸಾಮಾನ್ಯ ಮನುಷ್ಯರೂ ಅವರನ್ನು ಭೇಟಿ ಮಾಡಬಹುದಿತ್ತು. ಭ್ರಷ್ಟಾಚಾರವಿಲ್ಲದೆ 1 ಲಕ್ಷ ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಕ ಮಾಡಿದರೆಂದರು.

ರಾಜ್ಯ ವೈಜ್ಞಾನಿಕ ಮತ್ತು ಸಂಶೋಧನಾ ಪರಿಷತ್ ಜಿಲ್ಲಾಧ್ಯಕ್ಷ ರವಿ ನಾಕಲಗೂಡು ಅವರು ಮಾತನಾಡಿ, ಮಲೆನಾಡ ಗಾಂಧಿ ಎಂದೇ ಖ್ಯಾತರಾಗಿದ್ದ ಗೋವಿಂದೇಗೌಡರು ಭ್ರಷ್ಟಾಚಾರ ರಹಿತ, ಪ್ರಾಮಾಣಿಕ ರಾಜಕಾರಣಿ ಯಾಗಿದ್ದರು ಎಂದರು.

ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಅವರು ಮಾತನಾಡಿ, ಗೋವಿಂದೇಗೌಡರ ನಡೆ-ನುಡಿ, ವಿಚಾರಗಳ ಚಿಂತನ-ಮಂಥನ ನಡೆಯಬೇಕೆಂಬ ಕಾರಣದಿಂದ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಅವರು ತಂದ ಕ್ರಾಂತಿಕಾರಕ ಬದಲಾವಣೆಗಳು ಮುಂದಿನ ಪೀಳಿಗೆಗೆ ಗೊತ್ತಾಗಬೇಕೆಂದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ.ಕೃಷ್ಣೇಗೌಡ ಅವರು ಮಾತನಾಡಿ, ಗೋವಿಂದೇಗೌಡ ಶಿಕ್ಷಕರ ಪಾಲಿನ ಆರಾಧ್ಯ ದೈವ. ರಾಜಕಾರಣದಲ್ಲಿ ಅವರು ನಡೆದುಕೊಂಡ ರೀತಿ ಈಗಿನವರಿಗೆ ಮಾದರಿ. ಶಿಕ್ಷಕರ ನೇಮಕ ವೇಳೆ ಜಿಲ್ಲೆ ಜಿಲ್ಲೆಗೆ ಹೋಗಿ ಸಭೆ ಮಾಡಿದರು. ಭ್ರಷ್ಟಾಚಾರ ತಡೆಯಲು ಕೌನ್ಸಲಿಂಗ್ ನಡೆಸಿದರು. ಅವರ ಆದರ್ಶ, ಪ್ರಾಮಾಣಿಕ ಮತ್ತು ಜವಾಬ್ದಾರಿ ನಿರ್ವಹಣೆ ಅಭಿನಂದನೀಯ ಎಂದರು.

ಜಿಲ್ಲಾ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೃಷ್ಣಮೂರ್ತಿ, ಜಿಲ್ಲಾ ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಸವರಾಜು, ಮಾಜಿ ಅಧ್ಯಕ್ಷೆ ಚೈತ್ರ ಮಂಜೇಗೌಡ ಮಾತನಾಡಿದರು. ಕೊಪ್ಪ ಪತ್ರಕರ್ತರ ಸಂಘದ ಅಧ್ಯಕ್ಷ ಜಿನೇಶ್ ಇದ್ದರು. ಪತ್ರಕರ್ತ ಚಲಂ ಹಾಡ್ಲಹಳ್ಳಿ ನಿರೂಪಿಸಿದರು. ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್ ವಂದಿಸಿದರು.

# ಪ್ರತಿ ಶಾಲೆಗೂ ದೈಹಿಕ ಶಿಕ್ಷಕರ ನೇಮಕವಾಗಲಿ

• ಪ್ರಜೋದಯ ವರದಿ



**ಆಲೂರು:** ಪ್ರತಿ ಶಾಲೆಗೂ ಕನಿಷ್ಠ ಒಬ್ಬ ದೈಹಿಕ ಶಿಕ್ಷಕರನ್ನು ನೇಮಕ ಮಾಡಬೇಕೆಂದು ಶಾಸಕ ಸಿಮೆಂಟ್ ಮಂಜು ಅವರು ಸರ್ಕಾರವನ್ನು ಒತ್ತಾಯಿಸಿದರು.

ಪಟ್ಟಣದ ತಾಲ್ಲೂಕು ಕ್ರೀಡಾಂಗಣದಲ್ಲಿ ಶಾಲಾ ಶಿಕ್ಷಣ ಇಲಾಖೆ, ಮಲ್ನಾಡ್ ಪ್ರೌಢಶಾಲಾ ಸಂಘ ಹಾಗೂ ಶಾರದಾ ಕೆ.ಎನ್.ರಾಜಶೇಖರ್ ಪ್ರೌಢಶಾಲೆ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಲಾಗಿದ್ದ ಕೆ. ಹೊಸಕೋಟೆ ಹೋಬಳಿ ಮಟ್ಟದ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳಲ್ಲಿ ಕ್ರೀಡಾಸಕ್ತಿ ಬೆಳೆಸಲು ತಾಲ್ಲೂಕಿನಲ್ಲಿ ದೈಹಿಕ ಶಿಕ್ಷಕರ ಸಂಖ್ಯೆ ಅತ್ಯಂತ ಕಡಿಮೆ ಇರುವುದರಿಂದ ಮಕ್ಕಳಿಗೆ ಸಮರ್ಪಕ ಕ್ರೀಡಾ ತರಬೇತಿ ನೀಡಲು ಸಾಧ್ಯವಾಗುತ್ತಿಲ್ಲ. ಈ ಕುರಿತು ಸರ್ಕಾರದ ಗಮನ ಸೆಳೆದಿದ್ದೇನೆ. ಸರ್ಕಾರ ಕೂಡಲೆ ಕ್ರಮ ಕೈಗೊಂಡು ದೈಹಿಕ ಶಿಕ್ಷಕರ ನೇಮಕ ಮಾಡಬೇಕು ಎಂದರು.

ಮಕ್ಕಳಿಗೆ ಶಿಕ್ಷಣದ ಜೊತೆಗೆ ದೈಹಿಕ ಚಟುವಟಿಕೆ ಅತ್ಯಂತ ಅವಶ್ಯಕವಾಗಿದೆ. ಆಟವಾಡಲು ಲಭ್ಯವಿರುವ ಮೈದಾನಗಳು ಕಡಿಮೆಯಾಗುತ್ತಿವೆ. ಖಾಲಿ ಜಾಗಗಳು ಬಡಾವಣೆ ಹಾಗೂ ಕಟ್ಟಡಗಳಾಗಿ ಪರಿವರ್ತನೆಯಾಗುತ್ತಿದ್ದು, ಆಟದ ಮೈದಾನಗಳನ್ನು ಸಂರಕ್ಷಿಸುವ ಜವಾಬ್ದಾರಿಯನ್ನು ಸರ್ಕಾರ ವಹಿಸಬೇಕು. ಕ್ರೀಡೆ, ವ್ಯಾಯಾಮ ಹಾಗೂ ಬೆಳಗಿನ ವಾಕಿಂಗ್ ಉತ್ತಮ ಆರೋಗ್ಯಕ್ಕೆ ಸಹಕಾರಿ. ಶಾಲಾ ಕ್ರೀಡಾಕೂಟಗಳಿಗೆ ಸರ್ಕಾರ ನೀಡುತ್ತಿರುವ ಅನುದಾನ ಸಾಕಾಗುತ್ತಿಲ್ಲ. ಅನುದಾನ ಹೆಚ್ಚಿಸುವ ಜೊತೆಗೆ ಕ್ರೀಡಾಕೂಟಗಳ ಯಶಸ್ಸಿಗೆ ನೆರವಾಗುತ್ತಿರುವ ದಾನಿಗಳ ಸೇವೆ ಯನ್ನೂ ಪ್ರೋತ್ಸಾಹಿಸಬೇಕೆಂದರು.

ಸರ್ಕಾರಿ ಶಾಲೆಗಳನ್ನು ಉಳಿಸಿ ಬೆಳೆಸುವುದು ಎಲ್ಲರ ಜವಾಬ್ದಾರಿ. ಮಕ್ಕಳಿಗೆ ಉತ್ತಮ ಶಿಕ್ಷಣ, ಸಂಸ್ಕಾರ ಮತ್ತು ಶಿಸ್ತು ನೀಡುವ ಮೂಲಕ ದೇಶದ ಉತ್ತಮ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ ಎಂದರು.

ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಎ. ಜೆ.ಕೃಷ್ಣೇಗೌಡ, ವಿವಿಧ ಶಾಲೆಗಳ ಮುಖ್ಯೋಪಾಧ್ಯಾಯರು, ಮುಖಂಡರು ಶಿಕ್ಷಕರು ಉಪಸ್ಥಿತರಿದ್ದರು.

## ಗ್ರಾಮೀಣ ಜನರಿಗೂ 25 ದಿನಕ್ಕೆ ಸಿಗಲಿದೆ ಸಿಲಿಂಡರ್

**ತಿರುವನಂತಪುರ:** ನಗರ ಪ್ರದೇಶಗಳಂತೆ ಗ್ರಾಮೀಣ ಪ್ರದೇಶಗಳ ಗ್ರಾಹಕರು ಇನ್ನು ಮುಂದೆ ಒಂದು ಸಿಲಿಂಡರ್ ಖರೀದಿಸಿದ 25 ದಿನಗಳ ನಂತರ ಮತ್ತೊಂದು ಸಿಲಿಂಡರ್ ಪಡೆಯಬಹುದೆಂದು ಕೇಂದ್ರ ಸಚಿವ ಸುರೇಶ್ ಗೋಪಿ ಅವರು ತಿಳಿಸಿದ್ದಾರೆ.

ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಮರುಪೂರಣ (ರಿಫಿಲ್) ಅವಧಿಯನ್ನು ನಗರ ಮತ್ತು ಗ್ರಾಮೀಣ ಪ್ರದೇಶಗಳಿಗೆ ಒಂದೇ ರೀತಿ ನಿಗದಿಪಡಿಸಲಾಗಿದೆ ಎಂದು ಅವರು



ಫೇಸ್‌ಬುಕ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಪಶ್ಚಿಮ ಏಷ್ಯಾದ ಸಂಘರ್ಷದ ಹಿನ್ನಲೆಯಲ್ಲಿ ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯಯ ಉಂಟಾದ ಕಾರಣ ನಗರ ಪ್ರದೇಶಗಳಲ್ಲಿ ಒಂದು ಸಿಲಿಂಡರ್ ಖರೀದಿಸಿದ 25 ದಿನಗಳ ನಂತರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 45 ದಿನಗಳ ನಂತರ ಮತ್ತೊಂದು ಸಿಲಿಂಡರ್ ಪಡೆಯುವಂತೆ ನಿಯಮ ಜಾರಿಗೊಳಿಸಲಾ ಗಿತ್ತು. ಇದೀಗ ಎಲ್‌ಪಿಜಿ ಪೂರೈಕೆ ಪರಿಸ್ಥಿತಿ ಸುಧಾರಿಸಿದ್ದು, ಕೇಂದ್ರ ಸರ್ಕಾರ ನಿರ್ಬಂಧವನ್ನು ಸಡಿಲಿಸಿದೆ ಎಂದು ಸುರೇಶ್ ಗೋಪಿ ತಿಳಿಸಿದ್ದಾರೆ.

## ಪೂಜೆಗೆ ಅರ್ಚಕರ ನಡುವೆ ಜಟಾಪಟಿ

» ಮೊದಲನೇ ಪುಟದಿಂದ

ದಾಖಲೆಗಳನ್ನು ನೀಡಿ ಪೂಜೆಗೆ ಅನುಮತಿ ಪಡೆಯಬೇಕಿದೆ. ಎಲ್ಲಾ ಕುಟುಂಬಗಳು ತಸ್ತಿಕ್ ಪಡೆಯುತ್ತಿದ್ದು, ದೇವಾಲಯದ ಹೆಸರಿನಲ್ಲಿದ್ದ ಜಮೀನನ್ನು 24 ಕುಟುಂಬಗಳಿಗೆ ಹಂಚಿಕೆ ಮಾಡಲಾಗಿದೆ. ಈ ವರ್ಷ 24 ಕುಟುಂಬಗಳು ಪೂಜೆ ನೆರವೇರಿಸಲು ತಹಶೀಲ್ದಾರ್ ಕಚೇರಿಗೆ ದಾಖಲೆ ಸಲ್ಲಿಸಿದ್ದು, ಕೇವಲ 6 ಕುಟುಂಬಗಳಿಗೆ ಮಾತ್ರ ಉಪವಿಭಾಗಾಧಿಕಾರಿ ಅನುಮತಿ ನೀಡಿದ್ದಾರೆ. ಉಳಿದ 19 ಕುಟುಂಬಗಳಲ್ಲಿ 13 ಕುಟುಂಬಗಳು ದಾಖಲೆ ಸರಿ ಇದ್ದರೂ ಪೂಜೆಗೆ ಅವಕಾಶ ನೀಡುತ್ತಿಲ್ಲವೆಂಬ ಆರೋಪಿಸಿದ್ದಾರೆ.

ಇನ್ನುಳಿದ 6 ಕುಟುಂಬಗಳಲ್ಲಿ ಗಂಡು ಮಕ್ಕಳು ಇಲ್ಲದ ಕಾರಣ ಧಾರ್ಮಿಕ ದತ್ತಿ ಕಾಯ್ದೆ ಪ್ರಕಾರ ಆ ಕುಟುಂಬದ ಹೆಣ್ಣುಮಕ್ಕಳಿಗಾಗಲಿ, ಅವರ ಮಕ್ಕಳು, ಅಳಿಯಂದಿರಿಗಾಗಲಿ ಪೂಜೆ ಸಲ್ಲಿಸಲು ಅವಕಾಶ ಇಲ್ಲವೆಂಬ ಕಾನೂನು ಇರುವುದರಿಂದ ಅವಕಾಶ ನೀಡುವುದಿಲ್ಲ ಎಂದಿದ್ದಾರೆ. ಆದರೆ, ಮೊದಲು ಅನುಮತಿ ನೀಡಿರುವ ಆರು ಕುಟುಂಬಗಳಲ್ಲಿ ಒಂದು ಕುಟುಂಬದ ಅಳಿಯನಿಗೆ ಪೂಜೆ ಅವಕಾಶ ಕೊಟ್ಟಿರುವುದು ಸಂಘರ್ಷಕ್ಕೆ ಒಂದು ಕಾರಣವಾಗಿದೆ. ಸೋಮವಾರಕ್ಕೆ ಐದು ಕುಟುಂಬಗಳ ಪೂಜಾ ಅವಧಿ ಮುಗಿದಿದ್ದು, ಉಳಿದ ಅರ್ಚಕರ ಕುಟುಂಬದವರು ಹಿಂದಿನಿಂದ ನಡೆದುಕೊಂಡು ಬಂದಿರುವ ಪ್ರತೀತಿಯಂತೆ ಪೂಜೆ ಮಾಡಲು ಬಂದಿದ್ದಾರೆ. ಇದಕ್ಕೆ ತಹಶೀಲ್ದಾರ್ ಅನುಮತಿ ನೀಡಿರುವ ಕುಟುಂಬಸ್ಥರು ಅಡ್ಡಿಪಡಿಸಿದ್ದು, ನಮಗೆ ಅನುಮತಿ ನೀಡಿದ್ದಾರೆ, ನೀವು ಅನುಮತಿ ಪಡೆ ದುಕೊಂಡು ಬನ್ನಿ ಎಂದು ಹೇಳಿದ್ದು, ದೇವಾಲಯ ಆವರಣದಲ್ಲೇ ವಾಗ್ವಾದ ಶುರುವಾಗಿದೆ.

ಜಗಳ ತಾರಕಕ್ಕೇರಿ 19 ಅರ್ಚಕರ ಕುಟುಂಬಗಳು ದೇವಾಲಯಕ್ಕೆ ಬೀಗ ಹಾಕಿ ಹಿಂದಿನಂತೆ ನಮಗೆ ಪೂಜೆಗೆ ಅವಕಾಶ ಕೊಡಬೇಕು. ಇಲ್ಲವಾದಲ್ಲಿ ದೇವಾಲಯದ ಬಾಗಿಲು ತೆರೆಯಲು ಬಿಡುವುದಿಲ್ಲ ಎಂದು ಪ್ರತಿಭಟನೆ ನಡೆಸಿದರು.

**ತಹಶೀಲ್ದಾರ್‌ಗೆ ತರಾಟೆ:** ಪ್ರತಿಭಟನೆ ವಿಷಯ ತಿಳಿದು ಸ್ಥಳಕ್ಕೆ ಬಂದ ಹೊಳೆನರಸೀಪುರ ತಹಶೀಲ್ದಾರ್ ರೇಣುಕುಮಾರ್ ಅವರನ್ನು ಅರ್ಚಕರು ತರಾಟೆಗೆ ತೆಗೆದುಕೊಂಡರು. ನೀವು ಮಾಡಿರುವ ಆದೇಶದಿಂದ ಅರ್ಚಕರ ಕುಟುಂಬಗಳ ನಡುವೆ ವೈಮನಸ್ಸು ಉಂಟಾಗಿದೆ. ಅವರ ಜೊತೆ ನಮಗೆ ಏಕೆ ಪೂಜೆಗೆ ಅನುಮತಿ ಕೊಡಲಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು. ಇನ್ನೂ ಹದಿನೈದು ದಿನದಲ್ಲಿ 13 ಅರ್ಚಕರ ಕುಟುಂಬಗಳಿಗೆ ಪೂಜೆಗೆ ಅವಕಾಶ ಕಲ್ಪಿಸಲಾಗುವುದು. ಉಳಿದ 6 ಕುಟುಂಬಗಳಿಗೆ ಹಿರಿಯ ಅಧಿಕಾರಿಗಳ ಜೊತೆ ಚರ್ಚೆ ತೀರ್ಮಾನ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದ ನಂತರ ಪ್ರತಿಭಟನೆ ಹಿಂಪಡೆಯಲಾಯಿತು.

41ನೇ ನೇತ್ರದಾನ ಪಾಕ್ಷಿಕ ಜಾಥಾಗೆ ಚ.ರಾ.ಪಟ್ಟಣದಲ್ಲಿ ಚಾಲನೆ

# ಜನರಲ್ಲಿ ನೇತ್ರದಾನದ ಜಾಗೃತಿ ಅವಶ್ಯ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಜನರಲ್ಲಿ ನೇತ್ರದಾನದ ಮಹತ್ವದ ಕುರಿತು ಜಾಗೃತಿ ಮೂಡಿಸುವುದು ಮತ್ತು ಮರಣಾನಂತರ ನೇತ್ರದಾನ ಮಾಡಲು ಪ್ರೇರೇಪಿಸುವುದು ನೇತ್ರದಾನ ಪಾಕ್ಷಿಕದ ಉದ್ದೇಶವಾಗಿದೆ ಎಂದು ಲಯನ್ಸ್ ಸೇವಾ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ.ವಿ.ಮಹೇಶ್ ಅವರು ತಿಳಿಸಿದರು.

ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಸೋಮವಾರ ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿ, ಸಾರ್ವಜನಿಕ ಆಸ್ಪತ್ರೆ ಹಾಗೂ ಲಯನ್ಸ್ ಕ್ಲಬ್ ಚನ್ನರಾಯಪಟ್ಟಣ ವತಿಯಿಂದ 41ನೇ ನೇತ್ರದಾನ ಪಾಕ್ಷಿಕ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನೇತ್ರದಾನ ಮಹಾದಾನ ನೇತ್ರದಾನದಿಂದ ಅಂಧರಿಗೆ ಜಗತ್ತನ್ನು ನೋಡುವ ಅವಕಾಶ ಲಭಿಸುತ್ತದೆ. ಆದರೆ, ಸಾಮಾಜಿಕ ಮತ್ತು ಧಾರ್ಮಿಕ ಸಾಂಪ್ರದಾಯಿಕ ಕಟ್ಟುಪಾಡುಗಳು, ಭಯ ಮತ್ತು ಹಲವು ಗೊಂದಲದಿಂದಾಗಿ ಜನರು ನೇತ್ರದಾನ ಮಾಡಲು ಹಿಂದೇಟು ಹಾಕುತ್ತಾರೆ. ಅಗತ್ಯ ಮಾಹಿತಿ ಕೊರತೆಯಿಂದ ಆಸಕ್ತಿ ಇರುವವರು ಕೂಡ ನೇತ್ರದಾನ ಮಾಡಲು ಸಾಧ್ಯವಾಗುತ್ತಿಲ್ಲ. ನೇತ್ರದಾನದ ಬಗ್ಗೆ ಸಾರ್ವಜನಿಕ ಜಾಗೃತಿಯನ್ನು ಹೆಚ್ಚಿಸುವ ಉದ್ದೇಶದಿಂದ ಪ್ರತಿವರ್ಷ ರಾಷ್ಟ್ರೀಯ ನೇತ್ರದಾನ ಪಾಕ್ಷಿಕವನ್ನು ಆಚರಿಸಲಾಗುತ್ತದೆಂದು ತಿಳಿಸಿದರು.

ನೇತ್ರದಾನದಲ್ಲಿ ಅತ್ಯಂತ ಪ್ರಮುಖ ಹಂತವೆಂದರೆ ನಿಮ್ಮ ನಿರ್ಧಾರವನ್ನು ಕುಟುಂಬದವರಿಗೆ ಮುಂಚಿತವಾಗಿಯೇ ತಿಳಿಸುವುದು. ಏಕೆಂದರೆ ಕಣ್ಣುಗಳನ್ನು ಮರಣದ ನಂತರ ಮಾತ್ರ ದಾನ ಮಾಡಬಹುದು. ಮರಣವಾದ ನಂತರ 6 ಗಂಟೆಗಳ ಒಳಗೆ ನೇತ್ರ ಬ್ಯಾಂಕ್‌ಗೆ ಮಾಹಿತಿ ನೀಡ ಬೇಕಾಗುತ್ತದೆ. ಕುಟುಂಬದವರಿಗೆ ಈ ವಿಷಯ ತಿಳಿದಿದ್ದರೆ ಮಾತ್ರ ಸಮಯಕ್ಕೆ ಸರಿಯಾಗಿ ಪ್ರಕ್ರಿಯೆ ಆರಂಭವಾಗುತ್ತದೆ. ಈ ಒಂದು ಹೆಜ್ಜೆ ದಾನ ಯಶಸ್ವಿಯಾಗಲು ನಿರ್ಣಾಯಕ ವಾಗಿರುತ್ತದೆಂದು ತಿಳಿಸಿದರು.

ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ||ಬಿ.ಧರಣೇಶ್ ಮಾತನಾಡಿ, ಕಣ್ಣುಗಳು ಮಾನವ ದೇಹದ ಅತ್ಯಂತ ಅಮೂಲ್ಯವಾದ ಅಂಗವಾಗಿದೆ. ಸತ್ತ ನಂತರ ಕಣ್ಣುಗಳನ್ನು ಅಗ್ನಿ ಸ್ಪರ್ಶ ಅಥವಾ ಮಣ್ಣಿನಲ್ಲಿ ಹೂಳುವ ಮೂಲಕ ವ್ಯರ್ಥ ಮಾಡಬಾರದು. ಮೃತ ವ್ಯಕ್ತಿಯ ಕಣ್ಣುಗಳನ್ನು ದಾನ ಮಾಡುವುದರಿಂದ ಇಬ್ಬರು ಅಂಧರು ದೃಷ್ಟಿ ಪಡೆಯ ಬಹುದು. ನೇತ್ರದಾನವು ಕಾರ್ನಿಯಲ್ ಕುರುಡುತನದಿಂದ ಬಳಲುತ್ತಿರುವ ಜನರು ತಮ್ಮ ದೃಷ್ಟಿಯನ್ನು ಮರಳಿ ಪಡೆಯಲು ಸಹಾಯ ಮಾಡುತ್ತದೆಂದರು.

ಕಾರ್ನಿಯಾ, ಇದು ಕಣ್ಣಿನ ಮುಂಭಾಗದಲ್ಲಿರುವ ಸ್ಪಷ್ಟ ಮತ್ತು ಪಾರದರ್ಶಕ ಪದರವಾಗಿದೆ. ನೇತ್ರದಾನದ ಬಗ್ಗೆ ಜನರಲ್ಲಿ ಇನ್ನೂ ಹೆಚ್ಚಿನ ಜಾಗೃತಿ ಮೂಡಿಲ್ಲ. ಈ ಪ್ರಕ್ರಿಯೆಯಲ್ಲಿ ಇಡೀ ಕಣ್ಣನ್ನು ಕಸಿ ಮಾಡಲಾಗುತ್ತದೆಂದು ಜನರು ಭಾವಿಸುತ್ತಾರೆ. ಆದರೆ, ಅದು ಹಾಗಲ್ಲ. ದಾನ ಮಾಡಿದ ಕಣ್ಣುಗಳ ಕಾರ್ನಿಯಾಗಳನ್ನು ಮಾತ್ರ ಅಂಧರಿಗೆ ಕಸಿ ಮಾಡಲಾಗುತ್ತದೆ. ವ್ಯಕ್ತಿಯ ಮರಣದ ನಂತರ ನೇತ್ರ ಕಸಿ ನಡೆಯುವುದಾದರೂ, ಯಾವುದೇ ವ್ಯಕ್ತಿ ತನ್ನ ವಯಸ್ಸು, ಲಿಂಗ ಮತ್ತು ರಕ್ತದ ಗುಂಪನ್ನು ಲೆಕ್ಕಿಸದೆ ಜೀವಂತವಾಗಿರುವಾಗ ನೇತ್ರದಾನ ಮಾಡಲು ತನ್ನನ್ನು ನೋಂದಾಯಿಸಿಕೊಳ್ಳ ಬಹುದೆಂದು ತಿಳಿಸಿದರು.

ತಾಲ್ಲೂಕು ಆರೋಗ್ಯ ಅಧಿಕಾರಿ ಡಾ||ಟಿ.ಎಚ್. ಹರೀಶ್ ಮಾತನಾಡಿ, ಕಣ್ಣುಗಳು ನಮ್ಮ ದೇಹದ ಅತ್ಯಂತ ಅಮೂಲ್ಯವಾದ ಅಂಗಗಳಾಗಿದ್ದು, ಅವುಗಳ ರಕ್ಷಣೆ ಮತ್ತು ಆರೋಗ್ಯದ ಬಗ್ಗೆ ನಾವೆಲ್ಲರೂ ಹೆಚ್ಚಿನ ಎಚ್ಚರಿಕೆ ವಹಿಸುವುದು ಅತ್ಯಗತ್ಯವಾಗಿದೆ. ಕಣ್ಣಿನ ಅಕ್ಷಿ ಪಟಲ ರೋಗಕ್ಕೆ ಮಧುಮೇಹ, ರಕ್ತದೊತ್ತಡ ಕಾರಣವಾಗಿದ್ದು, ಕಣ್ಣಿನ ಕಾಯಿಲೆಯನ್ನು ಕೂಡಲೇ ವೈದ್ಯರಿಗೆ ತೋರಿಸಿ ಪರಿಹರಿಸಿಕೊಳ್ಳಬೇಕು. ಹಾಗಾದರೆ ಮಾತ್ರ ಗುಣಪಡಿಸಿಕೊಳ್ಳಬಹುದೆಂದು ತಿಳಿಸಿದರು.

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ನೇತ್ರತಜ್ಞೆ ಡಾ||ಎಸ್. ಸಿಂಧು ನೇತ್ರದಾನದ ಮಹತ್ವ ಮತ್ತು ನೇತ್ರದಾನದ ಸಂಪೂರ್ಣ ಪ್ರಕ್ರಿಯೆಯನ್ನು ವಿವರಿಸಿದ್ದರು.

ನಾಗೇಶ್ ಸಮೂಹ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ಮತ್ತು ವೈದ್ಯ ನರ್ಸಿಂಗ್ ಶಾಲೆಯ ವಿದ್ಯಾರ್ಥಿಗಳು ಹಾಗೂ ಲಯನ್ಸ್ ಕ್ಲಬ್ ಸನ್ ರೈಸ್, ಚನ್ನರಾಯಪಟ್ಟಣ ಪದಾಧಿಕಾರಿಗಳು ಜಾಥಾ ಕಾರ್ಯಕ್ರಮದಲ್ಲಿ ಸಾವಿನ ನಂತರ ದಾನವಾಗಲಿ ನಿಮ್ಮದೊಂದು ಕಣ್ಣು, ನಮ್ಮ ನಂತರವೂ ಜಗತ್ತನ್ನು ನೋಡಲು ನೇತ್ರದಾನವೊಂದೇ ದಾರಿ ಮುಂತಾದ ಘೋಷಣಾ ಫಲಕ ಗಳನ್ನು ಹಿಡಿದು ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಯಿತು.

ಲಯನ್ಸ್ ಸೇವಾ ಸಂಸ್ಥೆಯ ಅಧ್ಯಕ್ಷ ಜೆ.ಸಿ. ಗೋವಿಂದರಾಜು, ಕಾರ್ಯದರ್ಶಿ ಡಿ.ಕೆ.ಮಂಜುನಾಥ್, ಖಜಾಂಚಿ ಕಾಂತರಾಜು, ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಶುಶ್ರೂಷಾದೀಕ್ಷಕಿ ಪದ್ಮಮ್ಮ ಕ್ಷ-ಕಿರಣ ತಂತ್ರಜ್ಞ ಗುರುಮೂರ್ತಿ ಸೇರಿ ಆಸ್ಪತ್ರೆಯ ಸಿಬ್ಬಂದಿ ವರ್ಗ ಭಾಗವಹಿಸಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019